ಸಂಪುಟ: 01 ಸಂಚಿಕೆ: 14 ಪುಟ: 04 ಬೆಲೆ: 02 ಗುರುವಾರ ಜೂನ್ 18 2026 ಮೊ: 7411699198/7406928404

# ಅಜಾತ ಶತ್ರು

ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ

ಜನರ ನುಡಿ.... ಸತ್ಯದ ಧ್ವನಿ...

ಕನ್ನಡ ದಿನ ಪತ್ರಿಕೆ

ಪ್ರದೀಪಕುಮಾರ
ಸಂಪಾದಕರು




Volume:01 Issue:14 Pages:04 Price:02 THURSDAY JUNE 18 2026 RNI NO: KNKAN/26/A4008 E-mail:ajathashathru2026@gmail.com

## ಸತ್ಯವಾಣಿ ಕಟೋಕ್ತಿ

ಹತ್ತು ಜನರು ಹೇಳುವ ನೂರು
ಸುಳ್ಳು ನಂಬುವುದಕ್ಕಿಂತ,-
ಎರಡು ಜನ ಸಾತ್ವಿಕರು ಹೇಳುವ
ಒಂದು ಸತ್ಯವನ್ನು ನಂಬಿದಾಗ
ನ್ಯಾಯವು ಗೆಲ್ಲುವುದು, ಧರ್ಮವು
ಉಳಿಯುವುದು.



ವಾಣಿ ಭಂಡಾರಿ.

## ಪಟ್ಟಣ ಪಂಚಾಯತಿ ಖಾಲಿ ಹುದ್ದೆ ಭರ್ತಿಗೆ ಮನವಿ

ಅ.ಶ. ಸುದ್ದಿ ಕುಕನೂರು

**ಕುಕನೂರು: ಪಟ್ಟಣ ಪಂಚಾಯಿತಿ ಕಾರ್ಯಾಲಯಕ್ಕೆ ಅಗತ್ಯ ಸಿಬ್ಬಂದಿ ನಿಯೋಜನೆಗೆ ಆಗ್ರಹಿಸಿ ಪಟ್ಟಣ ಪಂಚಾಯತಿ ಅಧ್ಯಕ್ಷೆ ಲೀಲಾವತಿ ಪ್ರವೀಣಕುಮಾರ ಮುಧೋಳ ನೇತೃತ್ವದಲ್ಲಿ ಸದಸ್ಯರು, ಕೊಪ್ಪಳ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಡಾ.ಸುರೇಶ ಬಿ ಇಟ್ನಾಳಗೆ ಮಂಗಳವಾರ ಮನವಿ ಸಲ್ಲಿಸಿದರು.**



ಪಟ್ಟಣ ಪಂಚಾಯತಿ ಕಾರ್ಯಾಲಯದಲ್ಲಿ ಅನೇಕ ಹುದ್ದೆಗಳು ಖಾಲಿ ಇದ್ದರಿಂದ ಸಾರ್ವಜನಿಕರ ಕೆಲಸಗಳು ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಯಾಗಿದೆ. ಸಮುದಾಯ ಸಂಘಟನಾಧಿಕಾರಿ, ಕಿರಿಯ ಅಭಿಯಂತರ, ಪ್ರಥಮ ದರ್ಜೆ ಸಹಾಯಕ, ಕಿರಿಯ ಆರೋಗ್ಯ ನಿರಿಕ್ಷಕ, ದ್ವಿತೀಯ ದರ್ಜೆ ಸಹಾಯಕ, ಕರವಸೂಲಿಗಾರರು, ನೀರು ಸರಬರಾಜು ಮೇಲ್ವಿಚಾರಕರು ಒಬ್ಬರಂತೆ ಒಟ್ಟು 7 ಹುದ್ದೆಗಳು ಖಾಲಿ ಇವೆ. ಸಾರ್ವಜನಿಕರು ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಅವಶ್ಯ ಸಿಬ್ಬಂದಿಗಳನ್ನು ಕೂಡಲೇ ಕಾರ್ಯಾಲಯಕ್ಕೆ ಸ್ಥಳ ನಿಯುಕ್ತಗೊಳಿಸಿ ಆದೇಶ ಹೊರಡಿಸಬೇಕು. ಈಗಾಗಲೇ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪ್ರಥ-ಮ ದರ್ಜೆ ಸಹಾಯಕ ಅರುಣಕುಮಾರ ನಾಯ್ಕರ್ ಅವರು ಸಂಸದರ ಆಪ್ತ ಸಹಾಯಕರನ್ನಾಗಿ ನಿಯೋಜನೆ ಮಾಡಿದ್ದು, ಕೂಡಲೇ ರದ್ದು ಪಡಿಸಿ, ಬೇರೊಬ್ಬರನ್ನು ನಿಯೋಜನೆ ಮಾಡಬೇಕು. ಕರವಸೂಲಿಗಾರ ಸಿ.ಮೋಹನ್ ಅವರು ವಾರದಲ್ಲಿ 3 ದಿನ ಕರ್ತವ್ಯ ನಿರ್ವಹಿಸುತ್ತಿದ್ದು, ಇವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಮನವಿ ಸಲ್ಲಿಸುವ ಸಂದರ್ಭದಲ್ಲಿ ಪಟ್ಟಣ ಪಂಚಾಯತಿ ಉಪಾಧ್ಯಕ್ಷೆ ಮಂಜುಳಾ ಕಲ್ಮನಿ, ಸದಸ್ಯರಾದ ಸಿದ್ದಲಿಂಗಯ್ಯ ಉಳ್ಳಾಗಡ್ಡಿ, ರಾಮಣ್ಣ ಬಂಕದಮನಿ, ಬಾಲರಾಜ ಗಾಳಿ, ಶಿವರಾಜ ಯಲ್ಲಪ್ಪಗೌಡ, ಸಿರಾಜ್ ಕರಮುಡಿ, ಮಂಜುನಾಥ ಕೋಳೂರು, ಮಹಾಂತೇಶ್ ಹೂಗಾರ, ವೀರಣ್ಣ ಯಲಬುರ್ಗಿ, ರಫಿ ಹಿರೇಹಾಳ, ಪ್ರಮುಖರಾದ ವೀರೇಶ ಸಬರದ ಇತರರಿದ್ದರು.

ಅಜಾತ ಶತ್ರು
ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# 2ನೇ ಹಂತದ ಸಂಪುಟ ವಿಸ್ತರಣೆಯಲ್ಲಿ ಮಂತ್ರಿಯಾಗಲು ಬೆಂಬಲಿಗರ ಮೂಲಕ ಸಚಿವಾಕಾಂಕ್ಷಿಗಳ ಒತ್ತಡ



**ಬೆಂಗಳೂರು: ಮುಂದಿನವಾರದ ಒಳಗಾಗಿ ಸಚಿವ ಸಂಪುಟ 2ನೇ ಹಂತದ ವಿಸ್ತರಣೆ ಸಾಧ್ಯತೆಯಿರುವುದರಿಂದ ಸಚಿವಾಕಾಂಕ್ಷಿಗಳು ಬೆಂಬಲಿಗರ ಮೂಲಕ ಪ್ರತಿಭಟನೆ ನಡೆಸಿ ಒತ್ತಡ ಹೇರುವ ಪ್ರಯತ್ನ ನಡೆಸಿದ್ದಾರೆ. ದಿನೇ ದಿನೇ ಸಚಿವ ಸ್ಥಾನದ ಆಕಾಂಕ್ಷಿಗಳ ಒತ್ತಡ, ಪ್ರತಿಭಟನೆ ತೀವ್ರಗೊಳ್ಳುತ್ತಿದೆ. ಮೊದಲ ಹಂತದಲ್ಲಿ ಸಚಿವ ಸ್ಥಾನ ವಂಚಿತ ಹಲವು ಹಿರಿಯ ನಾಯಕರು ಒಳಗೊಳಗೆ ತಮ ಅಸಮಾಧಾನವನ್ನು ನುಂಗಿಕೊಂಡು 2ನೇ ಹಂತದ ವಿಸ್ತರಣೆಯಲ್ಲಿ ಅವಕಾಶ ಸಿಗಬಹುದು ಎಂಬ ನಿರೀಕ್ಷೆಯಲ್ಲಿದ್ದಾರೆ.**

ಸಂಪುಟದಲ್ಲಿ ಈವರೆಗೂ 14 ಮಂದಿ ಸಚಿವರಿಗೆ ಮಾತ್ರ ಅವಕಾಶ ಸಿಕ್ಕಿದೆ. ಬಾಕಿಯಿರುವ 20 ಸ್ಥಾನಗಳ ಭರ್ತಿಗೆ ಜೂನ್ 23 ಅಥವಾ 25 ರಂದು 2ನೇ ಹಂತದಲ್ಲಿ ಸಂಪುಟ ವಿಸ್ತರಣೆಯಾಗಲಿದೆ ಎಂದು ಹಿರಿಯ ನಾಯಕ ಟಿ.ಬಿ.ಜಯಚಂದ್ರ ಹೇಳಿದ್ದಾರೆ. ಅದೇ ನಿರೀಕ್ಷೆಯಲ್ಲಿ ಶಾಸಕರು ಲಾಬಿ ಆರಂಭಿಸಿದ್ದಾರೆ. ಮೊದಲಿಗೆ ಜಮೀರ್ ಅಹಮದ್ ಖಾನ್ ಬೆಂಬಲಿಗರು ಬೆಂಗಳೂರಿನ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಪ್ರತಿಭಟನೆ ನಡೆಸಿ, ಸಚಿವ ಸ್ಥಾನ ನೀಡಲು ಆಗ್ರಹಿಸಿದ್ದರು. ಬಹಳಷ್ಟು ಮಂದಿ ಮಾಜಿ ಸಚಿವರು, ಹಿರಿಯ ನಾಯಕರು ಪಕ್ಷದ ವಿರುದ್ಧ ಪ್ರತಿಭಟನೆ ಬೇಡ ಎಂದು ಸಂಧಾನ ಹಾಗೂ ಪ್ರಾರ್ಥನೆ ಮಾರ್ಗ ಹಿಡಿದಿದ್ದಾರೆ.

ಆದರೆ ಮೊಟ್ಟ ಮೊದಲಿಗೆ ಜಮೀರ್ ಅವರು ಪ್ರತಿಭಟನೆ ಮಾರ್ಗ ಹಿಡಿಯುವ ಮೂಲಕ ಸೆಡ್ಡು ಹೊಡೆದಿದ್ದಾರೆ. ಆದ-ರೆ ಅದು ಪ್ರಯೋಜನಕ್ಕೆ ಬಂದಂತೆ ಕಾಣುತ್ತಿಲ್ಲ. ನಿರಂತರವಾಗಿ ಮೂರ್ನಾಲ್ಕು ದಿನ ಪ್ರತಿಭಟನೆ ನಡೆಸಿದ ಜಮೀರ್ ಬೆಂಬಲಿಗರು ಹಿರಿಯ ನಾಯಕರನ್ನು ಭೇಟಿ ಮಾಡಿ ಮನವಿ ಮಾಡಿದ್ದರು. ತಮ ಹಾಗೂ ಪಕ್ಷದ ವಿರುದ್ಧ ಕೆಲಸ ಮಾಡಿದ ವ್ಯಕ್ತಿಗೆ ಸಚಿವ ಸ್ಥಾನ ಕೊಡಿಸಬೇಕೇ? ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ ಬಳಿಕ ಜಮೀರ್ ಬೆಂಬಲಿಗರು ತಣ್ಣಗಾಗಿದ್ದಾರೆ. ಬೆಳಗಾವಿ ಜಿಲ್ಲೆಯ ಅಥಣಿ ಕ್ಷೇತ್ರದ ಶಾಸಕ ಲಕ್ಷ್ಮಣ ಸವದಿ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಬೆಂಬಲಿಗರು ಪ್ರತಿಭಟನೆ ನಡೆಸಿದ್ದಾರೆ.

ವಿಜಯಪುರ ಜಿಲ್ಲೆಯ ನಾಗಾ ಠಾಣಾ ಬಸ್ ನಿಲ್ದಾಣದಲ್ಲಿ ನೂರಾರು ಸಂಖ್ಯೆಯ ಬೆಂಬಲಿಗರು ಧರಣಿ ನಡೆಸಿದ್ದು, ಲಕ್ಷ್ಮಣ ಸವದಿಯವರಿಗೆ ಸಚಿವ ಸ್ಥಾನ ನೀಡಲೇ ಬೇಕು ಎಂದು ಆಗ್ರಹಿಸಿದ್ದರು. ವಿಜಯಪುರ ಜಿಲ್ಲೆಯ ಇಂಡಿ ಕ್ಷೇತ್ರದ ಶಾಸಕ ಯಶವಂತರಾಯ ಗೌಡ ಪಾಟೀಲ ಅವರ ಬೆಂಬಲಿಗರು ನಿನ್ನೆ ಬೆಂಗಳೂ-ರಿನಲ್ಲಿ ಪ್ರತಿಭಟನೆ ನಡೆಸಿ, ಸಚಿವ ಸ್ಥಾನ ದೊರೆಯದೇ ಇದ್ದರೆ ಪದಾಧಿಕಾರಿಗಳು ಕಾಂಗ್ರೆಸ್ ಪಕ್ಷಕ್ಕೆ ಸಾಮೂಹಿಕ ರಾಜೀನಾಮೆ ನೀಡುತ್ತೇವೆ, ರಾಜ್ಯಾದ್ಯಂತ ಪ್ರತಿಭಟನೆ ನಡೆಸುತ್ತೇವೆ ಎಂದು ಎಚ್ಚರಿಕೆ ನೀಡಿದ್ದಾರೆ.

ಇಂದು ಕೊಪ್ಪಳ ಜಿಲ್ಲೆಯ ಯಲಬುರ್ಗಾ ಕ್ಷೇತ್ರದಲ್ಲಿ ಶಾಸಕ ಬಸವರಾಜರಾಯ ರೆಡ್ಡಿ ಅವರ ಬೆಂಬಲಿಗರು ಸಚಿವ ಸ್ಥಾನ ನೀಡುವಂತೆ ಪೂಜೆ, ಪ್ರಾಥ-ರ್ನೆಗಳ ಮೊರೆ ಹೋಗಿದ್ದಾರೆ. ರಾಯರೆಡ್ಡಿ ಈ ಹಿಂದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಆರ್ಥಿಕ ಸಲಹೆಗಾರರಾಗಿ ಸಚಿವ ಸಂಪುಟ ದರ್ಜೆಯ ಸ್ಥಾನಮಾನ ಅನುಭವಿಸಿದ್ದರು. ಸಿದ್ದರಾಮಯ್ಯ ಅವರ ನಾಯಕತ್ವದ ಬದಲಾವಣೆಗೆ ಪ್ರಬಲ ವಿರೋಧ ವ್ಯಕ್ತಪಡಿಸಿದ್ದರು. ಶಾಸಕಾಂಗ ಪಕ್ಷದ ಸಭೆಯಲ್ಲೇ ಸಿದ್ದರಾಮಯ್ಯ ಅವರ ಆಯ್ಕೆಯಾಗಿದೆ. ಬದಲಾವಣೆಗೂ ಶಾಸಕಾಂಗ ಸಭೆಯಲ್ಲೇ ನಿರ್ಧಾರವಾಗಬೇಕು. ಕಾಂಗ್ರೆಸ್ ಹೈಕಮಾಂಡ್ ಏಕಾಏಕಿ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದರು. ಆದರೆ ರಾಯರೆಡ್ಡಿ ಅವರ ಸವಾಲಿನಂತೆ ಹೈಕಮಾಂಡ್ ಸಿದ್ದರಾಮಯ್ಯಅವರಿಂದ ರಾಜೀನಾಮೆ ಕೊಡಿಸಿ, ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡಿದ್ದಲ್ಲದೇ ಶಾಸಕಾಂಗ ಸಭೆಯಲ್ಲಿ ಅದನ್ನು ಅಂಗೀಕ-ರಿಸುವಂತೆ ಮಾಡುವಲ್ಲಿ ಯಶಸ್ವಿಯಾಗಿ-ತ್ತು. ರಾಯರೆಡ್ಡಿ ಅವರು, ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುತ್ತಿದ್ದಂತೆ ಸಚಿವ ಸಂಪುಟ ಸೇರುವ ಆಸೆಯನ್ನೇ ಕೈ ಬಿಟ್ಟಿದ್ದರು. ಅದರೂ ಪರೋಕ್ಷವಾಗಿ ಬೆಂಬಲಿಗರ ಮೂಲಕ ವಿಶೇಷ ಪೂಜೆ, ಪ್ರಾರ್ಥನೆಗಳ ಮೂಲಕ ಒತ್ತಡ ಹೇರುವ ತಂತ್ರ ಅನುಸರಿಸುತ್ತಿದ್ದಾರೆ. ಈ ಹಿಂದೆ ಮಾಜಿ ಸಚಿವ ಶಿವರಾಜ ತಂಗಡಗಿ ಬೆಂಬಲಿಗರು ಸಚಿವ ಸ್ಥಾನಕ್ಕಾಗಿ ಪ್ರತಿಭಟನೆ ನಡೆಸಲು ಮುಂದಾಗಿದ್ದರು. ಅದನ್ನು ತಡೆದಿದ್ದ ಶಿವರಾಜ ತಂಗಡಗಿ ಪ್ರತಿಭಟನೆ ನಡೆಸುವುದರಿಂದ ಪಕ್ಷಕ್ಕೆ ಹಾನಿಯಾಗಲಿದೆ. ಪೂಜೆ, ಪ್ರಾರ್ಥನೆಗಳ ಮೂಲಕ ಒತ್ತಡ ಹೇರಿದರೆ ಸಾಕು ಎಂದು ಸಲಹೆ ನೀಡಿದ್ದರು. ಕೆಲವು ಶಾಸಕರು ಪ್ರಮುಖ ನಾಯಕರನ್ನು ಭೇಟಿ ಮಾಡಿ ನೇರವಾಗಿ ಒತ್ತಡ ಹೇರುವ ಪ್ರಯತ್ನ ನಡೆಸುತ್ತಿದ್ದಾರೆ. ಇನ್ನೂ ಕೆಲವರು ಹಿಂಬಾಲಕರ ಮೂಲಕ ಪ್ರತಿಭಟನೆ ನಡೆಸಿ, ಶತಾಯಗತಾಯ ಸಂಪುಟ ಸೇರಲೇಬೇಕೆಂದು ಜಿದ್ದಿಗೆ ಬಿದ್ದಿದ್ದಾರೆ. ಬೆಂಬಲಿಗರ ಪ್ರತಿಭಟನೆಗಳು ಕಾಂಗ್ರೆಸ್ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕುವಂತೆ ಮಾಡಿವೆ. ಸಚಿವ ಸ್ಥಾನ ಸಿಗದೇ ಅಸಮಾಧಾನಗೊಂಡಿರುವವರು ಬಂಡಾಯದ ಬಾವುಟ ಹಿಡಿಯುವ ಲಕ್ಷಣಗಳು ಗೋಚರಿಸುತ್ತಿವೆ.

# ಜಿ ಕನ್ನಡ ವಾಹಿನಿಯ ಸರಿಗಮಪಕ್ಕೆ "ಮಾನ್ಯತ' ಆಯ್ಕೆ



ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ಜೀ ವಾಹಿನಿ ಬೆಂಗಳೂರು ಇವರು ಜೂ.16ರ ಮಂಗಳವಾರದಂದು ಗಂಗಾವತಿಯಲ್ಲಿ ಆಯೋಜಿಸಿದ್ದ ಜೀ ಕನ್ನಡ ವಾಹಿನಿಯ ಕಾರ್ಯಕ್ರಮಕ್ಕೆ ಆಗಮಿಸಿದ ಸರಿಗಮಪ ಕಾರ್ಯಕ್ರಮದಲ್ಲಿ ಕುಮಾರಿ ಮಾನ್ಯತಾ ತಮ್ಮ ಮಧುರವಾದ ಧ್ವನಿಯ ಮೂಲಕ ಹಾಡನ್ನು ಹಾಡಿ ಆಯ್ಕೆಗೊಂಡ ಹಿನ್ನೆಲೆಯಲ್ಲಿ ಇವರನ್ನು ಗಂಗಾವತಿ ಕುರುಹಿನಶೆಟ್ಟಿ ಸಮಾಜದ ಯಜಮಾನರು ಹಾಗೂ ನೆರೆದ ಸಮಾಜದ ಭಾಂದವರು ಸನ್ಮಾನಿಸಿ ಶುಭಾಶಯವನ್ನು ಕೋರಿದರು.**

ಈ ವೇಳೆ ಮಾಜಿ ಸಚಿವ ಮಲ್ಲಿಕಾರ್ಜುನ ನಾಗಪ್ಪ ಮಾತನಾಡಿ ಬಾಲ್ಯದಲ್ಲಿ ಸಂಗೀತದ ಅಭಿರುಚಿ ಬೆಳೆಸಿಕೊಂಡಿರುವ ಕುಮಾರಿ ಮಾನ್ಯತಾ ಜೀ ಕನ್ನಡ ವಾಹಿನಿಯ ಸರಿಗಮಪ ಕಾರ್ಯಕ್ರಮದಲ್ಲಿ ಭಾಗವಹಿಸಿ ಆಯ್ಕೆಗೊಂಡಿರುವುದು ಸಂತಸದಾಯಕವಾಗಿದೆ. ಈ ಮೂಲಕ ಸಮಾಜದ ಕೀರ್ತಿಯನ್ನು ಹೆಚ್ಚಿಸಿದ್ದಾರೆ ಹಾಗೂ ಮುಂದಿನ ದಿನಗಳಲ್ಲಿ ಸರಿಗಮಪದ ವಿಜೇತರಾಗುವಂತೆ ಶುಭ ಕೋರಿದರು. ಕಾರ್ಯಕ್ರಮದಲ್ಲಿ ಮುಖಂಡರಾದ ವಾಯ್. ಕುಬೇರಪ್ಪ, ಸಿ ಶ್ಯಾಮಣ್ಣ,ಟಿ, ನಾಗಪ್ಪ, ಎಸ್.ತಿಪ್ಪಣ್ಣ, ಕೆ.ಬಸವರಾಜ, ಎಮ್. ರವೀಂದ್ರನಾಥ ನಾಗಪ್ಪ ಮತ್ತು ಕುರುಹಿನಶೆಟ್ಟಿ ಸಮಾಜದ ಎಲ್ಲಾ ಬಂದು ಭಾಂದವರು ಭಾಗವಹಿಸಿ ಶುಭಾಶಯಗಳು ಕೋರಿದರು.

# ರಾಯರಡ್ಡಿಗೆ ಸಚಿವ ಸ್ಥಾನ ; ಸಾಂಕೇತಿಕ ಪ್ರತಿಭಟನೆ

ಅ.ಶ. ಸುದ್ದಿ ಯಲಬುರ್ಗಾ

**ಯಲಬುರ್ಗಾ: ಪಟ್ಟಣದಲ್ಲಿ ಕಾಂಗ್ರೆಸ್ ಪ್ರಮುಖ ಮುಖಂಡರು ಶಾಸಕ ಬಸವರಾಜ ರಾಯರಡ್ಡಿಯವರಿಗೆ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿ ಸಾಂಕೇತಿಕ ಪ್ರತಿಭಟನೆ ನಡೆಸಿದರು. ಯಲಬುರ್ಗಾದಲ್ಲಿ, ಇಂದು ಮಂಗಳವಾರ ಪಟ್ಟಣದ ಶ್ರೀ ವಿಜಯ ದುರ್ಗಾದೇವಿ ದೇವಸ್ಥಾನದಲ್ಲಿ ಕಾಂಗ್ರೆಸ್ ಮುಖಂಡ ರಿಂದ ವಿಧಾನಸಭಾ ಕ್ಷೇತ್ರದ ಶಾಸಕ ಬಸವರಾಜ ರಾಯರಡ್ಡಿಯವರಿಗೆ ರಾಜ್ಯ ಸಚಿವ ಸಂಪುಟದಲ್ಲಿ ಸ್ಥಾನ ನೀಡಬೇಕು ಎಂದು ಒತ್ತಾಯಿಸಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರು ಪ್ರತಿಭಟನೆ ನಡೆಸಿದರು.**



ಈ ಸಂದರ್ಭದಲ್ಲಿ ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆರಿಬಸಪ್ಪ ನಿಡಗುಂದಿ ಮಾತನಾಡಿ ರಾಜ್ಯದ ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ರಚನೆಯಾಗಲಿರುವ ಎರಡನೇ ಹಂತದ ಸಚಿವ ಸಂಪುಟದಲ್ಲಿ ಬಸವರಾಜ ರಾಯರಡ್ಡಿಯವರಿಗೆ ಸಚಿವ ಸ್ಥಾನ ದೊರೆಯಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಕ್ಷೇತ್ರದ ಅಭಿವೃದ್ಧಿಗೆ ಹಾಗೂ ಪಕ್ಷದ ಸಂಘಟನೆಗೆ ರಾಯರಡ್ಡಿಯವರ ಕೊಡುಗೆ ಮಹತ್ವದ್ದಾಗಿದ್ದು,

ಅವರಿಗೆ ಸಚಿವ ಸ್ಥಾನ ನೀಡುವ ಮೂಲಕ ಯಲಬುರ್ಗಾ ಕ್ಷೇತ್ರಕ್ಕೆ ನ್ಯಾಯ ಒದಗಿಸಬೇಕೆಂದು ಅವರು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಕಾಂಗ್ರೆಸ್ ಪಕ್ಷದ ವಿವಿಧ ಪ್ರಮುಖ ಮುಖಂಡರು,ಮಹಿಳಾ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

# ಅಂತರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಕೊಪ್ಪಳದಲ್ಲಿ ಯೋಗೋತ್ಸವ ; ಯೋಗ ಸ್ಪರ್ಧೆ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: 12ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಯುಷ್ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಜಿಲ್ಲಾ ಕ್ರೀಡಾಂಗಣದಲ್ಲಿ ಮಂಗಳವಾರ ಜಿಲ್ಲಾ ಮಟ್ಟದ ಯೋಗೋತ್ಸವ ಹಾಗೂ ಯೋಗ ಸ್ಪರ್ಧೆ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.**

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಆಯುಷ್ ಅಧಿಕಾರಿ ಡಾ. ಪರ್ವತಗೌಡ ಬಿ. ಹೀರೆಗೌಡರ ವಹಿಸಿದ್ದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧಿಕಾರಿ ವಿಠ್ಠಲ ಜಾಬಗೌಡರ ಕಾರ್ಯಕ್ರಮವನ್ನು ಉದ್ಘಾಟಿಸಿದರು.



ಈ ಸಂದರ್ಭದಲ್ಲಿ ಮಾತನಾಡಿದ ಗಣ್ಯರು, ಯೋಗವು ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಕಾಪಾಡುವ ಅತ್ಯುತ್ತಮ ಸಾಧನವಾಗಿದ್ದು, ಇಂದಿನ ಒತ್ತಡದ ಜೀವನಶೈಲಿಯಲ್ಲಿ ಪ್ರತಿಯೊಬ್ಬರೂ ಯೋಗವನ್ನು ದಿನನಿತ್ಯದ ಜೀವನದ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಳ್ಳಬೇಕು ಎಂದು ಕರೆ ನೀಡಿದರು.

ಯೋಗವು ದೇಹದ ಚೈತನ್ಯವನ್ನು ಹೆಚ್ಚಿಸುವುದರ ಜೊತೆಗೆ ಮನಸ್ಸಿನ ಏಕಾಗ್ರತೆ, ಒತ್ತಡ ನಿವಾರಣೆ, ದೈಹಿಕ ಸಾಮರ್ಥ್ಯ ವೃದ್ಧಿ ಹಾಗೂ ಉತ್ತಮ ಆರೋಗ್ಯಕ್ಕೆ ಸಹಕಾರಿಯಾಗಿದೆ ಎಂದು ತಜ್ಞರು ತಿಳಿಸಿದರು. ಮಕ್ಕಳಿಂದ ಹಿಡಿದು ಹಿರಿಯ ನಾಗ-ರಿಕರವರೆಗೆ ಎಲ್ಲರೂ ಯೋಗಾಭ್ಯಾಸ ಮಾಡುವಂತೆ ಕಾರ್ಯಕ್ರಮದಲ್ಲಿ ಪ್ರೋತ್ಸಾಹಿಸಲಾಯಿತು. ಯೋಗ ತರಬೇತುದಾರರಾದ ಲೋಕೇಶ ಲಮಾಣಿ, ಬಸವರಾಜ ನೀರಗಂಟಿ, ರೇಷ್ಮಾ ವಡ್ಡಟ್ಟಿ, ವೀರುಪಾಕ್ಷಪ್ಪ ತಾವರಗೇರಾ, ಮಾರತಿ ಚಿತ್ರಗಾರ, ಜಯಶರಣಮ್ಮ, ಜಯಶ್ರೀ ಹಳಿಯಾಳ, ಅಕ್ಷತಾ, ನಟರಾಜ ಹಾಗೂ ರವಿರೆಡ್ಡಿ ಅವರ ಮಾರ್ಗದರ್ಶನದಲ್ಲಿ ವಿವಿಧ ಯೋಗಾಸನಗಳ ಪ್ರದರ್ಶನ ಮತ್ತು ಸಾಮೂಹಿಕ ಯೋಗಾಭ್ಯಾಸ ನಡೆಯಿತು.

ಜಿಲ್ಲಾ ಮಟ್ಟದ ಯೋಗ ಸ್ಪರ್ಧೆಗೆ ಸೌಮ್ಯಾ ಕೆ.ಎಸ್., ಜಯಶ್ರೀ ಬಸವರೆಡ್ಡಿ, ಜ್ಯೋತಿ, ಜಯಶ್ರೀ ಹಳಿಯಾಳ, ಬಸವರಾಜ ಎಂ., ಶೋಭಾ ಎಂ. ಎಚ್., ಪೂರ್ಣಿಮಾ ಹಾಗೂ ಪಂಕಜ ವಾಲಿಕಾರ ಅವರು ನಿರ್ಣಾಯಕರಾಗಿ ಕಾರ್ಯನಿರ್ವಹಿಸಿದರು. ಕಾರ್ಯಕ್ರಮದಲ್ಲಿ ವೈದ್ಯಾಧಿಕಾರಿಗಳಾದ ಡಾ. ವೈ.ಜೆ. ಶಿರವಾರ, ಡಾ. ಕವಿತಾ ಎಚ್. ಎಫ್., ಡಾ. ಶರಣಪ್ಪ ಹೈದ್ರಿ, ತಾಲೂಕು ಕ್ರೀಡಾಧಿಕಾರಿ ಶರಣಬಸವ ಬಂಡಿಹಾಳ, ವಲಯ ಅರಣ್ಯಾಧಿಕಾರಿ ಗುರನಗೌಡ್ರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಪರಿಷತ್‌ನ ಏಳು ಸ್ಥಾನಗಳಿಗೆ ನಾಳೆ ಮತದಾನ : ಅಡ್ಡ ಮತದಾನದ ತಡೆಯಲು ಹರಸಾಹಸ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಆಡಳಿತರೂಢ ಕಾಂಗ್ರೆಸ್ ಹಾಗೂ ಪ್ರತಿಪಕ್ಷಗಳ ನಡುವಿನ ಜಿದ್ದಾಜಿದ್ದಿಗೆ ಕಾರಣವಾಗಿರುವ ವಿಧಾನ ಪರಿಷತ್‌ನ ಏಳು ಸ್ಥಾನಗಳಿಗೆ ನಾಳೆ ಮತದಾನ ನಡೆಯಲಿದ್ದು ಅಡ್ಡ ಮತದಾನದ ಮೇಲೆ ಎಲ್ಲರ ಕಣ್ಣು ನೆಟ್ಟಿದೆ. ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ನಡೆಯುತ್ತಿರುವ ಈ ಚುನಾವಣೆ ಆಡಳಿತಾರೂಢ ಕಾಂಗ್ರೆಸ್‌ಗೆ ಪ್ರತಿಷ್ಠೆಯ ಪ್ರಶ್ನೆಯಾದರೆ, ವಿಪಕ್ಷಗಳಿಗೆ ತಮ ಮೈತ್ರಿ ಬಲವನ್ನು ಸಾಬೀತುಪಡಿಸಲು ಇರುವ ಅವಕಾಶವಾಗಿದೆ.**




ಈ ಚುನಾವಣೆ ಶಾಸಕರ ಮತಗಳ ಮೂಲಕ ನಡೆಯುವುದರಿಂದ, ಪ್ರತಿ ಅಭ್ಯರ್ಥಿಯ ಗೆಲುವಿಗೆ ನಿಗದಿತ ಮತಗಳ ಅವಶ್ಯಕತೆಯಿದೆ. ಸಂಜೆ ಮತ ಎಣಿಕೆ ಮುಗಿಯುತ್ತಿದ್ದಂತೆ ಸ್ಪಷ್ಟ ಚಿತ್ರಣ ಸಿಗಲಿದೆ. ಕಾಂಗ್ರೆಸ್ 4, ಬಿಜೆಪಿ 2 ಸ್ಥಾನಗಳನ್ನು ಸುಲಭವಾಗಿ ಗೆಲ್ಲಲಿದ್ದು ಉಳಿದಿರುವ ಒಂದು ಸ್ಥಾನಕ್ಕೆ ಕೈ ಹಾಗೂ ಜೆಡಿಎಸ್‌ನಲ್ಲಿ ಬಾರಿ ಪೈಪೋಟಿ ಏರ್ಪಟ್ಟಿದೆ. ಕಾಂಗ್ರೆಸ್ ಪಕ್ಷದಿಂದ ಐದನೇ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ವಿನಯ್ ಕಾರ್ತಿಕ್ ಹಾಗೂ ಎನ್‌ಡಿಎ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಿರುವ ಜೆಡಿಎಸ್‌ನ ಗೋವಿಂದರಾಜು ನಡುವೆ ಅದೃಷ್ಟ ಯಾರಿಗೆ ಎಂಬುದು ನಾಳೆಯ ಫಲಿತಾಂಶದಿಂದ ತಿಳಿಯಲಿದೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ನಡುವಿನ ಪ್ರತಿಷ್ಠೆಯ ಸಮರದಲ್ಲಿ ಗೆಲುವು ಯಾರಿಗೆ ಎಂಬುದನ್ನು ಶಾಸಕರು ನಾಳೆ ತೀರ್ಮಾನಿಸಲಿದ್ದಾರೆ.

ವಿಧಾನಸೌಧದ ಕೊಠಡಿ ಸಂಖ್ಯೆ 106 ರಲ್ಲಿ ಬೆಳಿಗ್ಗೆ 8 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆದು 5 ಗಂಟೆಯ ನಂತರ ಫಲಿತಾಂಶ ಪ್ರಕಟಗೊಳ್ಳಲಿದೆ. 7 ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದ್ದು, ಆಡಳಿತಾರೂಢ ಕಾಂಗ್ರೆಸ್ 4 ಮತ್ತು ಬಿಜೆಪಿ 2 ಸ್ಥಾನಗಳನ್ನು ಸುಲಭವಾಗಿ ಗೆಲ್ಲುವಷ್ಟು ಬಲವನ್ನು ಹೊಂದಿವೆ. ವಿಧಾನಸಭೆಯ ಒಟ್ಟು ಮತದಾರರ ಸಂಖ್ಯೆ 222 (ಕೆಲವು ಸದಸ್ಯರ ಅನರ್ಹತೆ ಮತ್ತು ನಿಧನದಿಂದಾಗಿ). ಗೆಲುವಿಗೆ ತಲಾ 28 ಮತಗಳ ಅಗತ್ಯವಿದೆ. ಅಡ್ಡಮತದಾನದ ಭೀತಿ ಮತ್ತು ತಂತ್ರಗಾರಿಕೆ: ಈ ಚುನಾವಣೆ ಕೇವಲ ಸಂಖ್ಯೆಗಳ ಆಟವಲ್ಲ, ಇದು ರಾಜಕೀಯ ತಂತ್ರಗಾರಿಕೆಯ ಪರೀಕ್ಷೆಯಾಗಿದೆ.

ಕಾಂಗ್ರೆಸ್‌ನ ತಂತ್ರ: ಗೆಲುವಿನ ಅಂಚಿನಲ್ಲಿರುವ ಕಾಂಗ್ರೆಸ್, ತನ್ನ ಮತಗಳ ಕ್ರೋಢೀಕರಣಕ್ಕಾಗಿ ಮತ್ತು ಅಡ್ಡಮತದಾನವನ್ನು ತಡೆಯಲು ತನ್ನ ಶಾಸಕರನ್ನು ರೆಸಾರ್ಟ್‌ನಲ್ಲಿ ಇರಿಸಿ, ಮಾಕ್ ವೋಟಿಂಗ್ ತರಬೇತಿ ನೀಡುತ್ತಿದೆ. ಪಕ್ಷದ ಶಿಸ್ತನ್ನು ಕಾಪಾಡಲು ಸಿಎಂ ಡಿ.ಕೆ. ಶಿವಕುಮಾರ್ ಅವರು ಹದ್ದಿನ ಕಣ್ಣಿಟ್ಟಿದ್ದಾರೆ. ಜೆಡಿಎಸ್ ತನ್ನ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳಲು ಬಿಜೆಪಿಯ ಹೆಚ್ಚುವರಿ ಮತಗಳನ್ನು ಮತ್ತು ಅತೃಪ್ತ ಶಾಸಕರ ಬೆಂಬಲವನ್ನು ನಂಬಿಕೊಂಡಿದೆ. ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಯ ನಡುವೆಯೂ, ಕೆಲವೊಂದು ರಾಜಕೀಯ ಬದಲಾವಣೆಗಳು ಅಡ್ಡಮತದಾನದ ಸಾಧ್ಯತೆಯನ್ನು ಹೆಚ್ಚಿಸಿವೆ. ಪಕ್ಷೇತರರ ಪಾತ್ರ: ಪಕ್ಷೇತರ ಶಾಸಕರು ಮತ್ತು ನಿರ್ದಿಷ್ಟವಾಗಿ ಬಿಜೆಪಿಯಿಂದ ಅಂತರ ಕಾಯ್ದುಕೊಂಡಿರುವ ಶಾಸಕರ ಮತಗಳು ನಿರ್ಣಾಯಕವಾಗಿವೆ.

ಇವರನ್ನು ತಮತ್ತ ಸೆಳೆಯಲು ಉಭಯ ಪಕ್ಷಗಳು ತೆರೆಮರೆಯಲ್ಲಿ ಭಾರೀ ಕಸರತ್ತು ನಡೆಸುತ್ತಿವೆ. ಇದು "ಗೌಪ್ಯ ಮತದಾನ" ವ್ಯವಸ್ಥೆಯಾಗಿರುವುದ-ರಿಂದ, ಪಕ್ಷದ ವಿಪ್ ಇದ್ದರೂ ಅಡ್ಡಮತದಾನ ನಡೆಯುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಹಳೆಯ ಇತಿಹಾಸಗಳನ್ನು ಗಮನಿಸಿದರೆ, ಈ ಬಾರಿಯೂ ಅಚ್ಚರಿಯ ಫಲಿತಾಂಶ ಬರುವ ಸಾಧ್ಯತೆ ಇದೆ. ಶಾಸಕರ ಅಸಮಾಧಾನ: ಪಕ್ಷದ ಒಳಗಿನ ಅಸಮಾಧಾನಿತ ಶಾಸಕರ ಮೇಲೆ ಎಲ್ಲರ ಕಣ್ಣಿದೆ. ತಮ ಪಕ್ಷದ ನಿರ್ಧಾರದ ವಿರುದ್ಧವಾಗಿ ಅಥ-'ವಾ ಅಡ್ಡಮತದಾನದ ಮೂಲಕ ತಮ ಅಸಮಾಧಾನ ಹೊರಹಾಕುವವರನ್ನು ಗುರುತಿಸುವುದು ನಾಯಕರಿಗೆ ದೊಡ್ಡ ಸವಾಲಾಗಿದೆ. ಪ್ರತಿಷ್ಠೆಯ ಕಣ: ಕೇವಲ ಒಂದು ಹೆಚ್ಚುವರಿ ಸ್ಥಾನದ ಮೇಲೆ ಇಡೀ ಚುನಾವಣೆಯ ಗತಿಯೇ ಅವಲಂಬಿತವಾಗಿದೆ. ನಾಳೆ ನಡೆಯುವ ಮತದಾನವು ರಾಜ್ಯ ರಾಜಕಾರಣದ ಮುಂದಿನ ದಿಕ್ಕನ್ನು ಸೂಚಿಸಲಿದೆ. ಅಡ್ಡಮತದಾನದ ಭೀತಿಯನ್ನು ಹೋಗಲಾಡಿಸಲು ಯಾವ ಪಕ್ಷದ ತಂತ್ರಗಾರಿಕೆ ಫಲ ನೀಡಲಿದೆ ಎಂಬುದು ಫಲಿತಾಂಶದ ಬಳಿಕವಷ್ಟೇ ಸ್ಪಷ್ಟವಾಗಲಿದೆ.

## ಆನೆ–ಮಾನವ ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಲ್ಪಿಸಲು ಸಂಸದ ಯದುವೀರ್ ಮನವಿ

ಅ.ಶ. ಸುದ್ದಿ ನವದೆಹಲಿ

**ನವದೆಹಲಿ: ಸಂಸದರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವರಾದ ಭೂಪೇಂದ್ರ ಯಾದವ್ ಅವರನ್ನು ಭೇಟಿ ಮಾಡಿ ಮೈಸೂರು –ಕೊಡಗು ಭಾಗಕ್ಕೆ ಸಂಬಂಧಿ ಸಿದ ಎರಡು ಮಹತ್ವದ ವಿಷಯಗಳ ಕುರಿತು ಮನವಿ ಸಲ್ಲಿಸಿದರು.**



ಕೊಡಗು ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಆನೆ ಮಾನವ ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಲ್ಪಿಸುವುದು ಮತ್ತು ಮೈಸೂರಿನ ತಿಪ್ಪಯ್ಯನ ಕೆರೆಯಲ್ಲಿ ನಗರ್‌ವನ್ ಯೋಜನೆ ಜಾರಿಗೊಳಿಸುವ ಕುರಿತು ಮನವಿ ಸಲ್ಲಿಸಿದರು. ಈ ವೇಳೆ ಮಾತನಾಡಿದ ಯದುವೀರ್ ಒಡೆಯರ್ ಅವರು, ಕೊಡಗು ಜಿಲ್ಲೆಯ ವಿವಿಧ ಭಾಗಗಳಲ್ಲಿ ಆನೆಗಳು ಕೃಷಿ ಭೂಮಿಗಳು ಮತ್ತು ಜನವಸತಿ ಪ್ರದೇಶಗಳಿಗೆ ನುಗ್ಗುತ್ತಿರುವ ಘಟನೆಗಳು ಹೆಚ್ಚುತ್ತಲೇ ಇದೆ, ಇದು ಜಿಲ್ಲೆಯ ಜನರ ಪ್ರಮುಖ ಸಮಸ್ಯೆಯಾಗಿ ಪರಿಣಮಿಸಿದೆ ಎಂದು ಸಚಿವರ ಗಮನಕ್ಕೆ ತಂದರು. ಆನೆಗಳ ದಾಳಿಯಿಂದ ಮಾನವ ಜೀವಹಾನಿ, ಬೆಳೆ ನಷ್ಟ, ಆಸ್ತಿ ಹಾನಿ ಮತ್ತು ಸಾರ್ವಜನಿಕರಲ್ಲಿ ಭಯದ ವಾತಾವರಣ ನಿರ್ಮಾಣವಾಗುತ್ತಿದೆ. ವಿಶೇಷವಾಗಿ ಅರಣ್ಯ ಅಂಚಿನ ಗ್ರಾಮಗಳಲ್ಲಿ ವಾಸಿಸುವ ರೈತರು, ತೋಟಗಾರರು ಮತ್ತು ಕಾರ್ಮಿಕರು ಈ ಸಮಸ್ಯೆಯಿಂದ ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ವಿವ-ರಿಸಿದರು. ಈ ಹಿನ್ನೆಲೆಯಲ್ಲಿ ಆನೆ ಮಾನವ ಸಂಘರ್ಷವನ್ನು ಕಡಿಮೆಗೊಳಿಸಲು ಸಮಗ್ರ ಹಾಗೂ ದೀರ್ಘಕಾಲೀನ ಕಾರ್ಯತಂತ್ರವನ್ನು ರೂಪಿಸಲು ಕೇಂದ್ರ ಸರ್ಕಾರದ ನೆರವು ಅಗತ್ಯವಿದೆ ಎಂದು ಅವರು ಮನವಿ ಮಾಡಿದರು. ಆನೆ ತಡೆಗೋಡೆಗಳ ಬಲವರ್ಧನೆ, ಸೌರ ಬೇಲಿ ವ್ಯವಸ್ಥೆ, ಆನೆಗಳ ಚಲನವಲನದ ವೈಜ್ಞಾನಿಕ ಮೇಲ್ವಿಚಾರಣೆ, ಮುನ್ನೆಚ್ಚರಿಕೆ ವ್ಯವಸ್ಥೆ, ಅರಣ್ಯ ವಾಸಸ್ಥಳಗಳ ಸುಧಾರಣೆ, ತ್ವರಿತ ಪ್ರತಿಕ್ರಿಯಾ ತಂಡಗಳ ರಚನೆ ಹಾಗೂ ಪೀಡಿತ ಕುಟುಂಬಗಳಿಗೆ ಮತ್ತು ರೈತರಿಗೆ ಸೂಕ್ತ ಪರಿಹಾರ ನೀಡುವ ವ್ಯವಸ್ಥೆಯನ್ನು ಬಲಪಡಿಸುವಂತೆ ಅವರು ಕೋರಿದರು. ಸಂಸದರು ಇದೇ ಸಂದರ್ಭದಲ್ಲಿ ಮೈಸೂರಿನ ಹೊರವರ್ತುಲ ರಸ್ತೆಯ ಸಮೀಪ, ಸರ್ದಾರ್ ವಲ್ಲಭಭಾಯಿ ಪಟೇಲ್ ನಗರದ ಬಳಿ ಇರುವ ತಿಪ್ಪಯ್ಯನ ಕೆರೆಯನ್ನು ನಗರ ವನ ಯೋಜನೆಯಡಿ ಅಭಿವೃದ್ಧಿಪಡಿಸುವಂತೆ ಪ್ರತ್ಯೇಕ ಮನವಿಯನ್ನೂ ಸಲ್ಲಿಸಿದರು. ಸಭೆಯ ನಂತರ ಮಾತನಾಡಿದ ಯದುವೀರ್ ಒಡೆಯರ್ ಅವರು, ಕೊಡಗಿನ ಆನೆಮಾನವ ಸಂಘರ್ಷ ಮತ್ತು ಮೈಸೂರಿನ ನಗರ ಹಸಿರು ಮೂಲಸೌಕರ್ಯ ಅಭಿವೃದ್ಧಿ ಎರಡೂ ವಿಷಯಗಳು ತಕ್ಷಣದ ಗಮನಕ್ಕೆ ಅರ್ಹವಾಗಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮನ್ವಯದಿಂದ ಕಾರ್ಯನಿರ್ವಹಿಸುವ ಅಗತ್ಯವಿದೆ ಎಂದು ಹೇಳಿದರು.

ಅಜಾತ ಶತ್ರು
ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ವಿದ್ಯುತ್ ಖಾಸಗಿಕರಣ ಖಂಡಿಸಿ ರಾಜ್ಯ ರೈತ ಸಂಘ ಪ್ರತಿಭಟನೆ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಸರಕಾರದ ವಿದ್ಯುತ್ ಖಾಸಗಿಕರಣ ನಡೆಯಿಂದ ರೈತರ ಮರಣ ಶಾಸನ ಬರೆದಂತಾಗುತ್ತದೆ ಎಂದು ರಾಜ್ಯ ರೈತ ಸಂಘ ಹಸಿರು ಸೇನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜ ಚಿಲವಾಡಗಿ ಆಕ್ರೋಶ ವ್ಯಕ್ತಪಡಿಸಿದರು.**



ಅವರು ವಿದ್ಯುತ್ ಖಾಸಗಿಕರಣ ಖಂಡಿಸಿ ನಗರದ ಗವಿಮಠದಿಂದ ಅಶೋಕ ವೃತ್ತದ ಮೂಲಕ ಕೊಪ್ಪಳ ಕೆಪಿಟಿಸಿಎಲ್ ಕಚೇ-ರಿಯವರೆಗೆ ಹಮ್ಮಿಕೊಂಡ ಬೃಹತ್ ಪ್ರತಿಭಟನೆಯಲ್ಲಿ ಮಾತನಾಡಿ ಕೆಪಿಟಿಸಿಎಲ್ ಸರಕಾರದ ಸ್ವಾಯತ್ತತೆಯಲ್ಲಿರುವ ಸಂಸ್ಥೆಯನ್ನು ಇಂದು ಖಾಸಗಿಕರಣ ಮಾಡಿದಲ್ಲಿ ಮುಂದೆ ಇದು ರೈತರ ಮರಣ ಶಾಸನ ಬರೆದಂತಾಗುತ್ತದೆ. ಖಾಸಗಿಕರಣದಿಂದ ಮುಂದಿನ ದಿನಗಳಲ್ಲಿ ರೈತರು ತೀವ್ರ ಸಂಕಷ್ಟಗಿಡಾಗಲಿದ್ದು, ಸರಕಾರ ಟಾಟಾ ಪವರ್ ಕಂಪನಿಗೆ ಕೊಡವ ನಿರ್ಧಾರವನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಒಂದು ವೇಳೆ ಹಟಕ್ಕೆ ಬಿದ್ದು ಸರಕಾರ ಖಾಸಗಿಕಯಣ ಹಿಂಪಡೆಯದೇ ಇದ್ದಲ್ಲಿ ಇಡಿ ರಾಜ್ಯದ ರೈತ ಸಂಘಟನೆಗಳು ಉಗ್ರ ಹೋರಾಟದ ಹಾದಿ ಹಿಡಿಯಬೇಕಾಗುತ್ತದೆ ಎಂದು ಎಚ್ಚರಿಸಿದರು. 25ವರ್ಷಗಳ ಹಿಂದೆ ತಾಲೂಕಿನ ಹಿರೇಬಗನಾಳದಲ್ಲಿ ಮೀಟರ್ ಕೂಡಿಸುವ ಸಂದರ್ಭದಲ್ಲಿ ಇಡಿ ರಾಜ್ಯಾದ್ಯಂತ ಹೋರಾಟ ಮಾಡಿ ಕೊಪ್ಪಳ ಜಿಲ್ಲೆಯಿಂದ ಏನು ಉತ್ತರ ಕೊಟ್ಟಿದ್ದೇವೋ ಹಾಗೇ ಮುಂದಿನ ದಿನಗಳಲ್ಲಿ ಕೊಪ್ಪಳ ಜಿಲ್ಲೆಯಿಂದ ಮತ್ತೊಮ್ಮೆ ರಾಜ್ಯ ರೈತ ಸಂಘ ಹಸೀರು ಸೇನೆಯ ಹೋರಾಟದ ಮೂಲಕ ಸರಕಾರವನ್ನು ಎಚ್ಚರಿಸುತ್ತೇವೆ ಎಂದರು.

ಸರಕಾರ ಖಾಸಗಿರಣ ಮಾಡುವ ನಿರ್ಧಾರ ತೆಗೆಕೊಂಡರೇ ಈ ಹಿಂದೆ ನರಗುಂದ ಭಂಡಾಯ ಆಗುವ ಸಂದರ್ಭದಲ್ಲಿ ಗುಂಡುರಾವ್ ಸರಕಾರ ಹೇಗೆ ಬಿತ್ತೋ ಹಾಗೆಯೇ ಖಾಸಗಿಕರಣ ನಿರ್ಧಾರ ಹಿಂಪಡೆಯದಿದ್ದಲ್ಲಿ ಈ ಸರಕಾರವು ಹಾಗೆಯೇ ಬಿಳುತ್ತದೆ ಎಂದು ಮತ್ತೊಮ್ಮೆ ಎಚ್ಚರಿಸಿದರು. ರಾಜ್ಯದ ರೈತರು ಒಕ್ಕಲೆಳೂವ ಮುನ್ನ ಸರಕಾರ ಜಾಗೃತವಾಗಬೇಕು ಎಂದರು.

ರೈತ ಸಂಘದಿಂದ ಹೋರಟ ಬೃಹತ್ ಪ್ರತಿಭಟನೆಯು ನಗರದ ಕೆಪಿಟಿಸಿ-ಎಲ್ ಕಾರ್ಯಪಾಲಕ ಅಭಿಯಂತರರ ಕಚೇರಿಗೆ ತೆರಳಿ ಗುಲ್ಬರ್ಗಾ ವಿದ್ಯುತ್ ಸರಬರಾಜು ನಿಗಮದ ಅಧಿಕಾರಿಗಳಿಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ವಿದ್ಯುತ್ ಖಾಸಗಿಕರಣ ಖಂಡಿಸಿ ಕಿನ್ನಾಳ ಗ್ರಾಮದಿಂದ ಸುಮಾರು 25 ಟ್ರ್ಯಾಕ್ಟರ್ ಮೂಲಕ ನೂರಾರು ರೈತರು ಆಗಮಿಸಿ ಈ ಪ್ರತಿಭಟನೆಯಲ್ಲಿ ಪಾಲ್ಗೋಂಡಿದ್ದರು.

# ಕಿಷ್ಕಿಂದ ಹಾಗೂ ಹುಲಿಗಿ ಕ್ಷೇತ್ರದಲ್ಲಿ ಸ್ವಚ್ಛತೆಗೆ ಮುಂದಾಗಲು ಮನವಿ



ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ಐತಿಹಾಸಿಕ ಹಾಗೂ ಇತಿಹಾಸ ಪ್ರಸಿದ್ಧವಾದ ಕಿಷ್ಕಿಂದ ಪ್ರದೇಶ ಸೇರಿದಂತೆ ಶಕ್ತಿಪೀಠವಾದ ಹುಲಿಗಿ ಪುಣ್ಯಕ್ಷೇತ್ರದಲ್ಲಿ ಸಂಪೂರ್ಣವಾಗಿ ಪ್ಲಾಸ್ಟಿಕ್ ನಿಷೇಧಿಸಬೇಕು ಹಾಗೂ ಸ್ವಚ್ಛತೆ ಕಾಪಾಡಬೇಕೆಂದು ನಗರದ ಕೇಂದ್ರೀಯ ಮಹಾವಿದ್ಯಾಲಯದ 10ನೇ ತರಗತಿ ವಿದ್ಯಾರ್ಥಿನಿ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದ್ದಾರೆ.**

ಈ ಕುರಿತು ಲಿಖಿತ ರೂಪದಲ್ಲಿ ಮನವಿ ಸಲ್ಲಿಸಿದ ವಿದ್ಯಾರ್ಥಿ ಹುಲಿಗಿ ಶ್ರೀ ಕ್ಷೇತ್ರಕ್ಕೆ ದೇಶದ ನಾನಾ ಭಾಗಗಳಿಂದ ಅಪಾರ ಭಕ್ತಾದಿಗಳು ಆಗಮಿಸುತ್ತಿದ್ದಾರೆ ಅಲ್ಲಿ ಸ್ವಚ್ಛತೆ ಎಂಬುದು ಮರೀಚಿಕೆಯಾಗಿದೆ ಗಬ್ಬು ನಾರುವ ತ್ಯಾಜ್ಯಗಳು ಕಂಡಲ್ಲಿ ಪ್ಲಾಸ್ಟಿಕ್ ಸೇರಿದಂತೆ ಹಸಿ ಕಸ ಒಣ ಕಸ ಇವುಗಳಿಂದ ನದಿ ಪಾತ್ರಕ್ಕೆ ಹೋಗುವ ಜನರು ಮೂಗು ಮುಚ್ಚಿಕೊಂಡು ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೊಪ್ಪಳ ಜಿಲ್ಲೆಯ ಹುಲಿಗಿ ಕ್ಷೇತ್ರದ ಬಗ್ಗೆ ಹೊರ ರಾಜ್ಯ ಹಾಗೂ ಬೇರೆ ಪ್ರದೇಶದಿಂದ ಆಗಮಿಸುವ ಜನರಿಗೆ ಜಿಲ್ಲೆಯ ಬಗ್ಗೆ ಅಸಡ್ಡೆ ಮನೋಭಾವನೆ ಬಾರದಂತೆ ಮುಂಜಾಗ್ರತ ಕ್ರಮಗಳನ್ನು ಅನುಸರಿಸಬೇಕೆಂದು ತಿಳಿಸಿದ ವಿದ್ಯಾರ್ಥಿನಿ ಮನವಿ ಪತ್ರದಲ್ಲಿ ತಿಳಿಸಿದ್ದಾಳೆ.

ಕಿಷ್ಕಿಂದ ಅಂಜನಾದ್ರಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಮಲಿನತೆ ಹಾಗೂ ಪ್ಲಾಸ್ಟಿಕ್ ತ್ಯಾಜ್ಯದಿಂದ ಸೇರಿದಂತೆ ವಾಹನ ಸಂಚಾರದಲ್ಲಿ ತೊಂದರೆ ಉಂಟಾಗುತ್ತಿದ್ದ ಹಿನ್ನೆಲೆಯಲ್ಲಿ ಸುಗಮ ಸಂಚಾರಕ್ಕೆ ಹಾಗೂ ಪ್ಲಾಸ್ಟಿಕ್ ನಿಷೇಧಕ್ಕೆ ಅಗತ್ಯಕ್ರಮಗಳನ್ನು ಅನುಸರಿಸಿ ಸ್ವಚ್ಛತೆ ಹಾಗೂ ಪವಿತ್ರತೆ ಮುಂದಾಗಬೇಕೆಂದು ಮನವಿ ಮಾಡಿದ್ದಾರೆ.ಒಟ್ಟಾರೆ ವಿದ್ಯಾರ್ಥಿನಿಯ ಮನವಿಗೆ ಜಿಲ್ಲಾಡಳಿತ ಯಾವ ಕ್ರಮ ತೆಗೆದುಕೊಳ್ಳುತ್ತದೆ ಕಾದು ನೋಡುತ್ತೇವೆ ಎಂದು ಮನವಿದಾರಳು ಹೇಳಿದಳು.

# ಸೊಳ್ಳೆ ಗಾತ್ರ ಡ್ರೋನ್ ಅಭಿವೃದ್ಧಿಪಡಿಸಿದ ಚೀನಾ

ಅ.ಶ. ಸುದ್ದಿ ಬೀಜಿಂಗ್

**ಬೀಜಿಂಗ್: ತಂತ್ರಜ್ಞಾನದಲ್ಲಿ ಭಾರಿ ಮುನ್ನಡೆಯಲ್ಲಿರುವ ಚೀನಾ ಇದೀಗ ಸೊಳ್ಳೆ ಗಾತ್ರದ ಡ್ರೋನ್ ಉತ್ಪಾದಿಸಿ ವಿಶ್ವದ ಗಮನ ಸೆಳೆದಿದೆ.ಚೀನಾದ ಹುನಾನ್ ಪ್ರಾಂತ್ಯದ ರಾಷ್ಟ್ರೀಯ ರಕ್ಷಣಾ ತಂತ್ರಜ್ಞಾನ ವಿಶ್ವವಿದ್ಯಾಲಯದ ರೊಬೊಟಿಕ್ಸ್ ಪ್ರಯೋಗಾಲಯ ರಹಸ್ಯ ಮಿಲಿಟರಿ ಕಾರ್ಯಾಚರಣೆಗಳಿಗಾಗಿ ಸೊಳ್ಳೆ ಗಾತ್ರದ ಡ್ರೋನ್ ಅಭಿವೃದ್ಧಿಪಡಿಸಿದೆ.**



ಚೀನಾ ಅಭಿವೃದ್ಧಿಪಡಿಸಿದ ಮೈಕ್ರೋ-ಡ್ರೋನ್ ಗಾತ್ರ ಮತ್ತು ವಿನ್ಯಾಸ ಎರಡರಲ್ಲೂ ಸೊಳ್ಳೆಯನ್ನು ಹೋಲುತ್ತದೆ. ಇದು ಎರಡು ಸಣ್ಣ ಎಲೆ ಆಕಾರದ ರೆಕ್ಕೆಗಳು ಮತ್ತು ಮೂರು ಕೂದಲು ಗಾತ್ರದ ತೆಳುವಾದ ಕಾಲುಗಳನ್ನು ಹೊಂದಿದೆ. ಕೋಲು ಆಕಾರದ ದೇಹವನ್ನು ಹೊಂದಿದೆ. ಈ ಡ್ರೋನ್‌ನ್ನು ಸ್ಮಾರ್ಟ್‌ಫೋನ್ ಬಳಸಿ ನಿಯಂತ್ರಿಸಬಹುದು. ಡ್ರೋನ್ ತುಂಬಾ ಚಿಕ್ಕದಾಗಿದ್ದು ಅದನ್ನು ಎರಡು ಬೆರಳುಗಳ ನಡುವೆ ಹಿಡಿದಿಟ್ಟುಕೊಳ್ಳಬಹುದಾಗಿದೆ ಎಂದು ಸೌತ್ ಚೀನಾ ಮಾರ್ನಿಂಗ್ ವರದಿ ಮಾಡಿದೆ.

ಸೊಳ್ಳೆಯಂತಹ ರೋಬೋಟ್ ಯುದ್ಧಭೂಮಿಯಲ್ಲಿ ಮಾಹಿತಿ ಕಲೆಹಾಕಲು ಮತ್ತು ವಿಶೇಷ ಕಾರ್ಯಾಚರಣೆಗಳಿಗಾಗಿ ವಿನ್ಯಾಸಗೊಳಿಸಲಾಗಿದೆ. ಇದರ ಸಣ್ಣ ಗಾತ್ರದಿಂದ ಅದೊಂದು ಡ್ರೋನ್ ಎಂದು ಊಹಿಸಲು ಕಷ್ಟಸಾಧ್ಯ. ಈ ಪುಟ್ಟ ಡ್ರೋನ್ ದೊಡ್ಡ ಡ್ರೋನ್‌ಗಳನ್ನು ಸುಲಭವಾಗಿ ಪತ್ತೆಹಚ್ಚುತ್ತದೆ. ಅಲ್ಲದೇ ಸೂಕ್ಷ್ಮ ಪ್ರದೇಶಗಳಲ್ಲಿ ರಹಸ್ಯ ಕಣ್ಗಾವಲು ಮತ್ತು ಗುಪ್ತಚರ ಮಾಹಿತಿ ಕಲೆಹಾಕಲು ಸಹಕಾರಿಯಾಗಿದೆ ಎಂದು ವಿದ್ಯಾರ್ಥಿ ಲಿಯಾಂಗ್ ಹೆಕ್ಸಿಯಾಂಗ್ ಹೇಳಿಕೊಂಡಿದ್ದಾನೆ. ಈ ಡ್ರೋನ್ ಏಕೆ ಮಹತ್ವದ್ದಾಗಿದೆ?ಇಷ್ಟು ಸಣ್ಣ ಪ್ರಮಾಣದಲ್ಲಿ ಡ್ರೋನ್ ಅನ್ನು ಅಭಿವೃದ್ಧಿಪಡಿಸುವುದು ಎಂಜಿನಿಯರ್‌ಗಳಿಗೆ ಭಾರೀ ಸವಾಲುಗಳನ್ನು ಒಡ್ಡುತ್ತದೆ. ಸಂವೇದಕಗಳು, ಬ್ಯಾಟರಿಗಳು, ನಿಯಂತ್ರಣ ಸರ್ಕ್ಯೂಟ್‌ಗಳು ಮತ್ತು ಸಂವಹನ ವ್ಯವಸ್ಥೆಗಳಂತಹ ಅಗತ್ಯ ಘಟಕಗಳು ಅತ್ಯಂತ ಸೀಮಿತ ಜಾಗದಲ್ಲಿ ಹೊಂದಿಕೊಳ್ಳಬೇಕಾಗುತ್ತದೆ.

ಹಾರಾಟದ ಸ್ಥಿರತೆ ಮತ್ತು ನಿಯಂತ್ರಣವನ್ನು ಕಾಯ್ದುಕೊಳ್ಳುವಾಗ ಕೀಟಗಳಂತಹ ಚಲನೆಯನ್ನು ಅದಕ್ಕೆ ಒದಗಿಸಲು ಮೈಕ್ರೋ-ಎಂಜಿನಿಯರಿಂಗ್, ಮೆಟೀರಿಯಲ್ ಸೈನ್ಸ್ ಮತ್ತು ಬಯೋನಿಕ್ಸ್ ಸೇರಿದಂತೆ ಬಹು ವಿಭಾಗಗಳ ಪರಿಣತಿ ಅಗತ್ಯವಿದೆ. ಸೊಳ್ಳೆ ಗಾತ್ರದ ಡ್ರೋನ್ ಅಭಿವೃದ್ಧಿಯಲ್ಲಿ ಚೀನಾ ಮಾತ್ರ ಮುಂದಿಲ್ಲ. ಅಮೆರಿಕದ ಟೆಲಿಡೈನ್ ಡಿಫೆನ್?ಸ ಸಹ ಬ್ಲ್ಯಾಕ್ ಹಾರ್ನೆಟ್ 4 ಎಂಬ ಪುಟ್ಟ ಡ್ರೋನ್ ಅಭಿವೃದ್ಧಿ ಪಡಿಸಿದೆ. ಈ ಡ್ರೋನ್ ನೇರ ದೃಶ್ಯಗಳು ಮತ್ತು ಡೇಟಾವನ್ನು ಸಶಸ್ತ್ರ ಪಡೆಗಳಿಗೆ ರವಾನಿಸುತ್ತದೆ. ಬ್ಲ್ಯಾಕ್ ಹಾರ್ನೆಟ್ 4 ಅಮೆರಿಕದ ಸೇನೆಯಲ್ಲಿ ಬಳಕೆಯಲ್ಲಿದೆ. ಹಾರ್ವರ್ಡ್ ವಿಶ್ವವಿದ್ಯಾಲಯದ ಸಂಶೋಧಕರು ರೋಬೋ ಬೀ ಎಂಬ ರೋಬೋಟ್ ಅಭಿವೃದ್ಧಿಪಡಿಸುತ್ತಿದ್ದಾರೆ. ಇದು ಕೀಟದಂತೆ ಕಾಣುವ ಮೈಕ್ರೋ ರೋಬೋಟ್ ಆಗಿದೆ. ಇವು ನೀರಿನ ಆಳದಲ್ಲಿ ಈಜುತ್ತವೆ.

ಅಲ್ಲದೇ ಕೀಟಗಳಂತೆ ಹಾರುವ ಸಾಮರ್ಥ್ಯ ಹೊಂದಿವೆ. ಮಿಲಿಟರಿ ಕೃಷಿಗಾಗಿ ಮೈಕ್ರೋ ರೋಬೋಟಿಕ್ಸ್ ಚೀನಾದ ಸೊಳ್ಳೆ ಗಾತ್ರದ ಡ್ರೋನ್ ಸೇನೆಯನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿಪಡಿಸಿದೆ. ಉದ್ದೇಶಿತ ಔಷಧ ವಿತರಣೆ, ಸಣ್ಣ ಶಸ್ತ್ರಚಿಕಿತ್ಸೆ, ರೋಗನಿರ್ಣಯ ಮತ್ತು ವೈದ್ಯಕೀಯ ಉಪಯೋಗಕ್ಕಾಗಿ ಪುಟ್ಟ ರೋಬೋಟ್‌ಗಳನ್ನು ಅನ್ವೇಷಿಸುತ್ತಿದ್ದಾರೆ. ಪರಿಸರ ಮೇಲ್ವಿಚಾರಣೆ ಮತ್ತು ಕೃಷಿ ಸಂಶೋಧನೆಗೂ ಈ ತಂತ್ರಜ್ಞಾನ ಬಳಕೆಗೆ ಚೀನಾ ಮುಂದಾಗಿದೆ.

# ಲೇಖಕರ ದಿನಚರಿ...

## ಮೌಲ್ಯ ಅರಿಯದವರ ಕಥೆ



ಒಂದು ಮರ ಇತ್ತು. ಆಕಾಶದೆತ್ತರಕ್ಕೆ ಬೆಳೆದಿದ್ದ ಆ ಮರಕ್ಕೆ ತನ್ನ ಎತ್ತರದ ಬಗ್ಗೆ ಹೆಮ್ಮೆ ಇತ್ತು. ಆದರೆ ತನ್ನನ್ನು ಅಷ್ಟು ಎತ್ತರಕ್ಕೆ ಬೆಳೆಸಿದ ಬೇರುಗಳ ಬಗ್ಗೆ ಅದು ಎಂದೂ ಯೋಚಿಸಿರಲಿಲ್ಲ. ಯಾಕೆಂದರೆ ಬದುಕಿನಲ್ಲಿ ಕಾಣಿಸುವ ಕೊಂಬೆಗಳೇ ದೊಡ್ಡದಾಗಿ ಕಾಣುತ್ತವೆ; ಕಾಣದ ಬೇರುಗಳ ತ್ಯಾಗವಲ್ಲ.

ಆ ಬೇರುಗಳು ಮೌನವಾಗಿದ್ದವು. ಮರಕ್ಕೆ ನೀರು ಕೊಟ್ಟವು, ಬಲ ಕೊಟ್ಟವು, ಬಿರುಗಾಳಿಗಳ ಎದುರು ನಿಲ್ಲುವ ಶಕ್ತಿ ಕೊಟ್ಟವು. ಪ್ರತಿಯಾಗಿ ಅವು ಏನನ್ನೂ ಕೇಳಲಿಲ್ಲ. ನಿಜವಾದ ಸಂಬಂಧಗಳೂ ಹಾಗೆಯೇ. ತಮ್ಮ ಮೌಲ್ಯವನ್ನು ಹೇಳಿಕೊಳ್ಳುವುದಿಲ್ಲ; ಜೊತೆಯಾಗಿ ನಿಲ್ಲುವುದನ್ನಷ್ಟೇ ತಿಳಿದಿರುತ್ತವೆ. ಒಂದು ದಿನ ಒಂದು ಬಳ್ಳಿ ಮರವನ್ನು ಸುತ್ತಿಕೊಂಡಿತು. ಮೊದಲು ಅದು ನೆರಳಿನಂತೆ ಕಾಣಿಸಿತು. ನಂತರ ಸಾಂಗತ್ಯದಂತೆ ಭಾಸವಾಯಿತು. ಕೊನೆಗೆ ಅದರ ಮಾತುಗಳು ಮರದ ಮನಸ್ಸಿನೊಳಗೆ ಜಾಗ ಮಾಡಿಕೊಂಡವು. "ನಿನ್ನ ಬೆಳವಣಿಗೆಗೆ ಅಡ್ಡಿಯಾಗಿರುವುದು ಈ ಬೇರುಗಳೇ. ನಿನ್ನ ಶಕ್ತಿಯನ್ನು ಹೀರಿಕೊಳ್ಳುತ್ತಿರುವುದೂ ಅವೇ. ನೀನು ಇನ್ನೂ ಎತ್ತರಕ್ಕೆ ಬೆಳೆಯಬೇಕಾದರೆ, ಮೊದಲು ಇವುಗಳಿಂದ ದೂರವಾಗಬೇಕು..." ಎಂದು ಅದು ದಿನವೂ ಗುಸುಗುಸು ಮಾಡತೊಡಗಿತು.

ಮರ ಮೊದಲು ಆ ಮಾತುಗಳನ್ನು ಕೇಳಿ ಸುಮ್ಮನಿತ್ತು. ನಂತರ ಯೋಚಿಸತೊಡಗಿತು. ಕೊನೆಗೆ ಅನುಮಾನಿಸತೊಡಗಿತು. ಅನುಮಾನ ಒಂದು ವಿಚಿತ್ರ ಬೀಜ. ಅದು ಮನಸ್ಸಿನಲ್ಲಿ ಮೊಳಕೆಯೊಡೆದರೆ, ವರ್ಷಗಳ ನಂಬಿಕೆಯನ್ನು ಕೆಲವೇ ದಿನಗಳಲ್ಲಿ ಒಣಗಿಸಿಬಿಡುತ್ತದೆ. ವರ್ಷಗಳ ಕಾಲ ತನ್ನನ್ನು ಪೋಷಿಸಿದ ಬೇರುಗಳ ಒಳ್ಳೆಯತನ ಮರೆಯಾಯಿತು. ಅವು ಮಾಡಿದ ಸಾವಿರ ಉಪಕಾರಗಳು ಕಾಣಲಿಲ್ಲ. ಆದರೆ ಹೇಳಿಕೊಟ್ಟ ಒಂದು ಆರೋಪ ಮಾತ್ರ ಸತ್ಯದಂತೆ ಕಾಣತೊಡಗಿತು. ನಿಧಾನವಾಗಿ ಮರ ತನ್ನ ಬೇರುಗಳಿಂದ ದೂರವಾಗತೊಡಗಿತು.

ತನ್ನ ಅಸ್ತಿತ್ವದ ಆದಾರವನ್ನೇ ಅನುಮಾನಿಸತೊಡಗಿತು. ಅದೇ ಸಮಯದಲ್ಲಿ ಮರಕ್ಕೆ ತನ್ನ ಎತ್ತರ, ತನ್ನ ಸೌಂದರ್ಯ, ತನ್ನ ಸುತ್ತಮುತ್ತಲಿನ ಹೊಗಳಿಕೆಗಳೇ ಮುಖ್ಯವಾಗತೊಡಗಿದವು. ನೆಲದೊಳಗೆ ಮೌನವಾಗಿ ತನ್ನನ್ನು ಹಿಡಿದಿಟ್ಟಿದ್ದ ಬೇರುಗಳಿಗಿಂತ, ಹೊರಗಿನಿಂದ ತನ್ನನ್ನು ಹೊಗಳುತ್ತಿದ್ದ ಬಳ್ಳಿಯ ಮಾತುಗಳಿಗೆ ಹೆಚ್ಚು ಬೆಲೆ ಸಿಕ್ಕಿತು. ಜೀವನವೂ ಕೆಲವೊಮ್ಮೆ ಹೀಗೆಯೇ. ಅಧಿಕಾರದ ವ್ಯಾಮೋಹ, ಹಣದ ಹೊಳಪು, ಅಂತಸ್ತಿನ ಅಹಂಕಾರ ಇವೆಲ್ಲವೂ ಕೆಲವರ ಕಣ್ಣುಗಳ ಮೇಲೆ ಕಾಣದ ಪರದೆಯನ್ನು ಎಳೆಯುತ್ತವೆ. ಆಗ ಸಂಬಂಧಗಳ ಮೌಲ್ಯ ಕಾಣುವುದಿಲ್ಲ. ಪ್ರೀತಿಗಿಂತ ಪ್ರತಿಷ್ಠೆ ದೊಡ್ಡದಾಗಿ ಕಾಣುತ್ತದೆ. ನಿಸ್ವಾರ್ಥ ಬಂಧಗಳಿಗಿಂತ ಹೆಸರು, ಸ್ಥಾನಮಾನ ಮತ್ತು ಲಾಭದ ಲೆಕ್ಕಾಚಾರಗಳು ಮುಖ್ಯವಾಗುತ್ತವೆ.

ಹಣವಿರುವವರು ಎಷ್ಟೇ ಮೋಸ ಮಾಡಿದರೂ ಅವರ ತಪ್ಪುಗಳನ್ನು ಕ್ಷಮಿಸಲಾಗುತ್ತದೆ. ಯಾಕೆಂದರೆ ಅವರ ಬಳಿ ಪ್ರಭಾವ ಇರುತ್ತದೆ. ಆದರೆ ಏನೂ ತಪ್ಪು ಮಾಡದ ಒಬ್ಬ ಸರಳ ಮನುಷ್ಯನ ಮೌನವನ್ನು ದುರ್ಬಲತೆ ಎಂದು ಭಾವಿಸಲಾಗುತ್ತದೆ. ಅವನ ಗೌರವಕ್ಕೆ ಬೆಲೆ ಕೊಡುವುದಿಲ್ಲ. ಅವನ ಪ್ರೀತಿಯನ್ನು ಅರ್ಥಮಾಡಿಕೊಳ್ಳುವುದಿಲ್ಲ. ಅವನು ಪ್ರತಿಕ್ರಿಯಿಸದಿದ್ದರೆ ಅವನ ಮೇಲೆ ಮತ್ತಷ್ಟು ಆರೋಪಗಳನ್ನು ಹಾಕಲಾಗುತ್ತದೆ. ಮರ ಕೂಡ ಹಾಗೆಯೇ ಮಾಡಿತು. ತನ್ನನ್ನು ಮೌನವಾಗಿ ಪೋಷಿಸಿದ ಬೇರುಗಳ ಪ್ರೀತಿಯನ್ನು ದುರ್ಬಲತೆ ಎಂದು ಭಾವಿಸಿತು. ತನ್ನನ್ನು ಹಿಡಿದು ನಿಲ್ಲಿಸಿದ ಬಂಧಗಳನ್ನೇ ಭಾರವೆಂದುಕೊಂಡಿತು.

ಆದರೆ ಕಾಲ ಎಂದಿಗೂ ಒಂದೇ ಋತುವಿನಲ್ಲಿ ನಿಲ್ಲುವುದಿಲ್ಲ.ಒಂದು ದಿನ ಗಾಳಿ ಬಂತು. ಮತ್ತೊಂದು ದಿನ ಮಳೆ ಬಂತು. ಆಮೇಲೆ ಬಿರುಗಾಳಿ ಬಂತು.ಆಗ ಮರಕ್ಕೆ ಅರ್ಥವಾಯಿತು ತನ್ನನ್ನು ನಿಲ್ಲಿಸಿದ್ದು ಬಳ್ಳಿಯ ಮಾತುಗಳಲ್ಲ, ಬೇರುಗಳ ಮೌನದ ಪ್ರೀತಿ ಎಂದು. ಬಿರುಗಾಳಿಯ ಎದುರು ನಿಲ್ಲುವ ಶಕ್ತಿ ಅದರಲ್ಲಿರಲಿಲ್ಲ. ಯಾಕೆಂದರೆ ಅದರ ಬಲ ಕೊಂಬೆಗಳಲ್ಲಿ ಇರಲಿಲ್ಲ; ಅದು ಕಳೆದುಕೊಂಡ ಬೇರುಗಳಲ್ಲಿತ್ತು. ಬಳ್ಳಿ ಮಾತ್ರ ತನ್ನ ಸ್ವಭಾವದಂತೆ ಮತ್ತೊಂದು ಮರವನ್ನು ಹುಡುಕಿಕೊಂಡು ಹೊರಟುಹೋಯಿತು.

ನೆಲಕ್ಕುರುಳಿದ ಮರ ಮೊದಲ ಬಾರಿಗೆ ಆಕಾಶವನ್ನು ನೋಡುತ್ತಾ ಅತ್ತಿತು. ಆಗ ಅದು ಕಾಲವನ್ನು ಕೇಳಿತು: "ತಪ್ಪು ಯಾರದ್ದು? ಬಳ್ಳಿಯದ್ದಾ? ಬೇರುಗಳದ್ದಾ?" ಎಂದು ಕಾಲ ನಕ್ಕು ಹೇಳಿತು: "ಬಳ್ಳಿಯ ಸ್ವಭಾವ ಹತ್ತುವುದು. ಬೇರುಗಳ ಸ್ವಭಾವ ಹಿಡಿದಿಡುವುದು. ಆದರೆ ಹಿಡಿದಿಟ್ಟ ಕೈಗಳನ್ನು ಬಿಟ್ಟು, ಹತ್ತಿಕೊಂಡ ನೆರಳನ್ನು ನಂಬಿದ್ದು ಯಾರ ನಿರ್ಧಾರ?" ಮರದ ಬಳಿ ಉತ್ತರ ಇರಲಿಲ್ಲ. ಯಾಕೆಂದರೆ ಕೆಲವು ಪ್ರಶ್ನೆಗಳಿಗೆ ಉತ್ತರ ಸಿಗುತ್ತದೆ. ಆದರೆ ಕೆಲವು ತಪ್ಪುಗಳಿಗೆ ಕ್ಷಮೆ ಸಿಕ್ಕರೂ, ಕಳೆದುಹೋದ ಸಂಬಂಧಗಳು ಮರಳಿ ಸಿಗುವುದಿಲ್ಲ. ಆ ದಿನ ಅದಕ್ಕೆ ಒಂದು ಸತ್ಯ ಅರ್ಥವಾಯಿತು. ನಮ್ಮವರ ಬಗ್ಗೆ ಹೇಳಿದ ಪ್ರತಿಯೊಂದು ಮಾತು ಸತ್ಯವಾಗಿರುವುದಿಲ್ಲ.

ನಮ್ಮವರನ್ನು ದೂರ ಮಾಡುವ ಪ್ರತಿಯೊಂದು ಸಲಹೆಯೂ ಒಳಿತಿಗಾಗಿ ಬಂದಿರುವುದಿಲ್ಲ. ಕೆಲವರು ಸಂಬಂಧಗಳನ್ನು ಜೋಡಿಸುವುದಿಲ್ಲ; ಮನಸ್ಸುಗಳನ್ನು ಒಡೆಯುತ್ತಾರೆ. ಕೆಲವರು ಬೆಂಕಿ ಹಚ್ಚುವುದಿಲ್ಲ; ಅನುಮಾನದ ಕಿಡಿ ಸಾಕು. ಸಂಬಂಧಗಳ ಮೌಲ್ಯ ಅರಿಯದವರು, ಅವುಗಳ ಅನುಪಸ್ಥಿತಿಯ ನೋವನ್ನು ಒಂದು ದಿನ ಅನುಭವಿಸಲೇಬೇಕು. ಆದರೆ ಆಗ ಅದು ಅರಿವಿನ ಕ್ಷಣವಾಗಿರುವುದಿಲ್ಲ; ಪಶ್ಚಾತ್ತಾಪದ ಕ್ಷಣವಾಗಿರುತ್ತದೆ. ಕಾಲ ಯಾರ ಮೇಲೂ ದ್ವೇಷ ಸಾಧಿಸುವುದಿಲ್ಲ.

ಅದು ಕೇವಲ ಕನ್ನಡಿ ಹಿಡಿಯುತ್ತದೆ. ನಾವು ಯಾರನ್ನು ನಂಬಿದ್ದೆವು, ಯಾರನ್ನು ಕಳೆದುಕೊಂಡೆವು, ಯಾರನ್ನು ನೋಯಿಸಿದ್ದೇವೆ ಎಂಬುದನ್ನು ನಮಗೇ ತೋರಿಸುತ್ತದೆ. ಏಕೆಂದರೆ ಬದುಕಿನ ದೊಡ್ಡ ನಷ್ಟಗಳು ಹಣ ಕಳೆದುಕೊಂಡಾಗ ಆಗುವುದಿಲ್ಲ; ನಮ್ಮನ್ನು ನಿಸ್ವಾರ್ಥವಾಗಿ ಪ್ರೀತಿಸಿದವರನ್ನು ಕಳೆದುಕೊಂಡಾಗ ಆಗುತ್ತವೆ. ಮರ ಕುಸಿದ ನಂತರ ಬೇರುಗಳ ಮಹತ್ವ ಅರ್ಥವಾಗಬಹುದು. ಆದರೆ ಅರಿವಾದ ಪ್ರತಿಯೊಂದು ಸತ್ಯಕ್ಕೂ ತಿದ್ದುಪಡಿ ಮಾಡುವ ಅವಕಾಶ ಸಿಗುವುದಿಲ್ಲ.

**ಅಂತರಾರ್ಥ:** ಹೇಳಿಕೆ ಮಾತುಗಳು ಸಂಬಂಧಗಳನ್ನು ದೂರ ಮಾಡಬಹುದು; ಆದರೆ ಬದುಕನ್ನು ಕಟ್ಟಿಕೊಡಲು ಸಾಧ್ಯವಿಲ್ಲ. ನಮ್ಮನ್ನು ನಿಲ್ಲಿಸುವುದು ಅಧಿಕಾರ, ಹಣ ಅಥವಾ ಹೊಗಳಿಕೆಗಳಲ್ಲ; ಕಷ್ಟದ ಸಮಯದಲ್ಲೂ ಜೊತೆಯಾಗಿ ನಿಲ್ಲುವ ನಿಸ್ವಾರ್ಥ ಸಂಬಂಧಗಳೇ.



ಸುಹಾಸ್ ಎಂ (ಸುಮುಕ) ಕನ್ನಾಯಕನಹಳ್ಳಿ ಗ್ರಾಮ, ಟಿ ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ. 6360004509

## ಹುಣ್ಣಿಮೆ ಬೆಳದಿಂಗಳು




ಹುಣ್ಣಿಮೆ ರಾತ್ರಿ ಬೆಳಕನು
ಇಚ್ಚೈಸದವರಾರು?
ಹಾಲು ಬೆಳದಿಂಗಳಿಗೆ
ಜಗವೆಲ್ಲಾ ಮಾರು!
ಧರೆಗೆಲ್ಲಾ ಬಂದಂತೆ
ಜವ್ವನದ ಜೋರು
ಬಾನು ಭುವಿಗೆ
ಸೊಬಗಿನಾಟದ
ಹೊದರು!!
ಬಯಲ ಗಾಳಿಯಲಿ
ತಂಬೆಲರ ಪರಿಮಳ
ನಡುವೆ ಸುಳಿವ
ಎದೆಬಡಿತ
ಸಿಂಚನಗಳು!!
ಬಣ್ಣವೇರಿದ ಹೃದಯ
ಮಿಡಿತಗಳ ಹಂದಿರ!
ಮನಮನಕೆ ಬೆಸೆದಿದೆ
ಒಲವಿನ ಮಂದಾರ!
ಕಣ್ಣ ಕನಸುಗಳೆಲ್ಲ
ಚಿತ್ತಾರದ ರೂಪ
ಹೊತ್ತ ಮೈಮನಸುಗಳು
ಮಧು ಲೇಪನ ಶೃಂಗಾರ!!



ಶ್ರೀಮತಿ ಶಾರದಾ ಶ್ರಾವಣಸಿಂಗ್ ರಜಪೂತ.

## ಗಜಲ್






ಕಾಯದಿರು ಕಾಡದಿರು ವರುಣ ಬೇಡಿಕೊಂಬೆನು
ಒಮ್ಮೆಯಾದರೂ ತೋರಿಸು ಕರುಣ ಬೇಡಿಕೊಂಬೆನು

ಸುಟ್ಟ ಧರೆಯ ಒಡಲು ಉರಿಯುತಿದೆ ಬಿಸಿಲು ಹೆಚ್ಚಿ
ನಿನ್ನ ಬರವಿಗೆ ಕಾದಿರುವ ಸ್ಥಿತಿ ದಾರುಣ ಬೇಡಿಕೊಂಬೆನು

ಎಲ್ಲಿ ನೋಡಿದರಲ್ಲಿ ಬಿರುಕು ಬಿಟ್ಟ ನೆಲದವ್ವನ ಅಳು
ಆಸರೆ ಪಡೆದ ಹುಳ ಹುಪ್ಪಡಿ ಮರಣ ಬೇಡಿಕೊಂಬೆನು

ಮುಗಿದಿವೆ ಕೂಡಿಟ್ಟ ಜೋಳ ಗೋದಿಧಾನ್ಯದ ಗೋದಾಮು
ತಿನ್ನಲೇನೂ ಉಳಿದಿಲ್ಲವಿಲ್ಲಿ ಈಗ ಕಾರಣ ಬೇಡಿಕೊಂಬೆನು

ಹಿಂದೆಂದೂ ಕಾಣದಷ್ಟು ಕೋಪಗೊಂಡಿದೆ ದೇವಗಣವು
ಉಳಿವ ದಾರಿ ಕಾಣದು ಜೋಗಿ ಹರಣ ಬೇಡಿಕೊಂಬೆನು



ವೈ.ಎಂ.ಯಾಕೊಳ್ಳಿ

## ಕ್ರೀಡಾಸಕ್ತಿದಾಯಕ ಮೆಲುಕು



**ಕಿರಿಯ ಸ್ನೇಹಿತೆಯೊಬ್ಬಳು ತನ್ನ ಕ್ರೀಡಾ ಜೀವನದ ಕುರಿತು ಲೇಖನವೊಂದನ್ನು ಬರೆದು ಅದನ್ನು ನನ್ನ ವಾಟ್ಸಪ್ ಗೆ ಕಳುಹಿಸಿ ಅಕ್ಕ, ನನ್ನ ಜೊತೆ ನೀನು ಆಟವಾಡಿದ ನೆನಪುಗಳು ಇದ್ದರೆ ಅದನ್ನು ನನ್ನೊಂದಿಗೆ ಹಂಚಿಕೋ ಎಂದು ಹೇಳಿದಾಗ ನಾನು ತುಣುಕು ತುಣುಕಾಗಿ ನನ್ನ ಕ್ರೀಡಾ ಜೀವನದ ಕೆಲವು ವಿಷಯಗಳನ್ನು ಆಕೆಯೊಂದಿಗೆ ಹಂಚಿಕೊಂಡೆ. ಚಿಕ್ಕಂದಿನಲ್ಲಿ ಕೊಪ್ಪಳದ ರೇಲ್ವೆ ಸ್ಟೇಷನ್ ಬಳಿಯಲ್ಲಿ ಅತ್ಯಂತ ವಿಶಾಲವಾದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದ ನಮಗೆ ಆಡಲು ಸ್ಥಳದ ಕೊರತೆ ಇರಲಿಲ್ಲ.**

ಮನೆಯ ಕಾಂಪೌಂಡ್ ನ ಒಳ ಆವರಣದಲ್ಲಿ ಕಟ್ಟೆಯ ಕೆಳಭಾಗದಲ್ಲಿ ಎರಡು ದೊಡ್ಡ ದೊಡ್ಡ ಗೂಣುಗಳಿದ್ದು ಐದಾರು ಜನ ಆರಾಮಾಗಿ ಕೂತು ಆಟ ಆಡಬಹುದಿತ್ತು. ನನ್ನ ತಂದೆ ಹೈದರಾಬಾದ್ ನಿಂದ ತಂದು ಕೊಡುತ್ತಿದ್ದ ಅಂದಿನ ಕಾಲಕ್ಕೆ ಆಧುನಿಕ ಎಂದೆನಿಸುವ ನನ್ನೆಲ್ಲಾ ಅಡುಗೆ ಆಟದ ಸಾಮಾನುಗಳನ್ನು ಜೋಡಿಸಿ ಅಡುಗೆ ಆಟವನ್ನು ನಾವು ಸ್ನೇಹಿತರೆಲ್ಲ ಸೇರಿ ಆಡುತ್ತಿದ್ದೆವು.ಜಾಲಿ ಗಿಡದ ಎಲೆಯನ್ನು ಹರಿದು ಅವಲಕ್ಕಿ ಮಾಡಿದರೆ ಚಹಾದ ಕಪ್ಪುಗಳಲ್ಲಿ ನೀರು ಹಾಕಿ ಚಹಾ ಎಂದು ಕೊಡುತ್ತಿದ್ದೆವು. ಮಧ್ಯಾಹ್ನದ ಊಟಕ್ಕೆ ಮನೆಗೆ ಬರುತ್ತಿದ್ದ ನನ್ನ ತಂದೆ ಬೈಕ್ ನಿಂದ ಕೆಳಗಡೆ ಇಳಿಯುತ್ತಲೇ ಇವತ್ತು ಅಡುಗೆ ಏನು ಮಾಡಿದ್ದೀರಿ ಎಂದು ಕೇಳುತ್ತಿದ್ದರು.

ಹುಮ್ಮಸ್ಸಿನಿಂದ ನಾವೆಲ್ಲಾ ಸ್ನೇಹಿತರು ಬೇರೆ ಬೇರೆ ಅಡುಗೆಗಳ ಹೆಸರನ್ನು ಹೇಳುತ್ತಿದ್ದೆವು. ಆಗ ನನ್ನ ಅಪ್ಪ ತಾಯಿಯನ್ನು ಕುರಿತು ನಾನು ಇವತ್ತು ಮಕ್ಕಳ ಮನೆಯಲ್ಲಿ ಊಟ ಮಾಡುತ್ತೇನೆ ಎಂದು ಹೇಳುತ್ತಿದ್ದರಲ್ಲದೆ ನಾವು ತಟ್ಟೆಯಲ್ಲಿ ಹಾಕಿಕೊಟ್ಟದ್ದನ್ನು ತಿಂದಂತೆ ನಟಿಸಿ ನಮಗೆ ಶಭಾಷ್ ಗಿರಿ ಕೊಟ್ಟು ಮತ್ತೆ ಮನೆಯ ಒಳಗೆ ಹೋಗಿ ಊಟ ಮಾಡುತ್ತಿದ್ದರು.... ನಾವು ಮಕ್ಕಳಿಗೆಲ್ಲ ಇದು ತುಂಬಾ ಖುಷಿಯ ವಿಷಯವಾಗಿರುತ್ತಿತ್ತು. ಒಂದೇ ಕಂಪೌಂಡಿನಲ್ಲಿ ನಾಲ್ಕಾರು ಮನೆಗಳು ಇದ್ದು ಕಣ್ಣ ಮುಚ್ಚಾಲೆ ಆಟ ನಮ್ಮ ಅಚ್ಚುಮೆಚ್ಚಿನ ಆಟವಾಡಲು ನಮ್ಮ ನಾಲ್ಕು ಮನೆಗಳ ಹೊರಾವರಣವನ್ನು ನಾವು ಸುತ್ತು ಹಾಕುತ್ತಾ ಆಡುತ್ತಿದ್ದೆವು. ಇನ್ನು ಯಾರಾದರೂ ಹೊಸ ಮನೆಗಳನ್ನು ಕಟ್ಟುತ್ತಿದ್ದರೆ ಆ ಮನೆಯಲ್ಲಿ ಕೂಡ ಕಣ್ಣ ಮುಚ್ಚಾಲೆ ಆಟ ಆಡುತ್ತಿದ್ದೆವು. ನಿರ್ಮಾಣ ಹಂತದ ಕಟ್ಟಡದ ಹೊರಗಿರುವ ಉಸುಕಿನಲ್ಲಿ ಗುಬ್ಬಚ್ಚಿ ಮನೆಗಳನ್ನು ಕಟ್ಟುವ, ಅವುಗಳನ್ನು ಅಲಂಕರಿಸುವ ಆಟ ಕೂಡ ಆಡುತ್ತಿದ್ದೆವು.

ಇನ್ನು ನಾವು ಹೆಣ್ಣು ಮಕ್ಕಳು ಆಣೆಕಲ್ಲಿನ ಆಟ, ಉಪ್ಪಿನ ಮೂಟೆ ಆಟ, ಕುಂಟೆಬಿಲ್ಲೆ, ಕುಂಟು ಮುಟ್ಟಾಟ, ಸರಬಡಿಗೆ ಆಟ, ಜೋಡು ಮುಟ್ಟಾಟ ಹೀಗೆ ನೂರೆಂಟು ಹೊರಾಂಗಣ ಆಟಗಳನ್ನು ಮಾಡಿದರೆ, ಮಧ್ಯಾಹ್ನದ ಬಿಸಿಲಿನ ಸಮಯದಲ್ಲಿ ಚಕ್ಕ ಎಂದು ಕರೆಯಲ್ಪಡುವ ಕವಡೆ ಆಟ, ಹುಲಿಮನೆ ಆಟ, ಬಳೆ ಚೂರಿನ ಆಟ ಮುಂತಾದ ಹತ್ತು ಹಲವು ಆಟಗಳನ್ನು ಆಡುತ್ತಿದ್ದೆವು ಎಷ್ಟೋ ಬಾರಿ ಆಟ ಆಡುವಾಗ ಬಿದ್ದು ಮೊಣಕಾಲು, ಮೊಣಕೈ ಕೆತ್ತಿಸಿಕೊಂಡದ್ದು ಕೂಡ ಉಂಟು. ಇವೆಲ್ಲ ಚಿಕ್ಕಂದಿನಲ್ಲಿ ಆಡುತ್ತಿದ್ದ ಮನೆಯ ಹತ್ತಿರದ ಆಟಗಳಾದರೆ ಮುಂದೆ ಶಾಲೆಗೆ ಹೋದ ನಂತರ ಅಲ್ಲಿ ಕೂಡ ಆಟಗಳಲ್ಲಿ ನಾನು ಪಾಲ್ಗೊಳ್ಳುತ್ತಿದೆ. ಐದನೇ ತರಗತಿಗೆ ಮನೆಯಿಂದ ಒಂದು ಒಂದೂವರೆ ಕಿಲೋಮೀಟರ್ ದೂರದ ಹಿರಿಯ ಪ್ರಾಥಮಿಕ ಶಾಲೆಗೆ ಪ್ರವೇಶ ಪಡೆದ ನಾನು ಸರಿಸುಮಾರು ಆರು ವರ್ಷಗಳ ಕಾಲ ಅಂದರೆ 5ನೇ ತರಗತಿಯಿಂದ 10ನೇ ತರಗತಿಯವರೆಗೆ ಕೋಕೋ ಆಟದಲ್ಲಿ ಜಿಲ್ಲಾ ಮಟ್ಟದವರೆಗೂ ಹೋಗಿ ಆಡಿ ಬಂದಿದ್ದೇನೆ. ಐದನೇ ತರಗತಿಯಲ್ಲಿ ಎಕ್ಸ್ಟ್ರಾ ಪ್ಲೇಯರ್ ಎಂದು ಆಯ್ಕೆಯಾದ ನಾನು ನಂತರ ಎರಡನೇ ಮೂರು ಜನ ಆಟಗಾರರಲ್ಲಿ ನಂತರ ಮೊದಲನೇ ಮೂರು ಜನ ಆಟಗಾರರಲ್ಲಿ ನಂತರ ಮುಖ್ಯ ಆಟಗಾರ್ತಿಯಾಗಿ ಕೋಕೋ ಆಟದಲ್ಲಿ ಸದಾ ಪಾಲ್ಗೊಂಡಿದ್ದೇನೆ.

ನನ್ನಿಂದ ಬಂದ ಒಳ್ಳೆಯ ಆಟ ಮುಂದೆ ನನ್ನನ್ನು ಕೋಕೋ ಆಟದಲ್ಲಿ ಕ್ಯಾಪ್ಟನ್ ಆಗಿ ಸಿತ್ತು. ಒಂದು ಬಾರಿ ಎಂದು ಸತತ ಏಳುವರೆ ನಿಮಿಷಗಳ ಕಾಲ ನನ್ನನ್ನು ಔಟ್ ಮಾಡಲು ಸಾಧ್ಯವಾಗದೆ ಹೋದಾಗ ಎದುರಾಳಿ ತಂಡದ ಕ್ರೀಡಾಪಟು ನನ್ನ ಕಾಲಿಗೆ ಜೋರಾಗಿ ಹೊಡೆದಾಗ ಮುಗ್ಗರಿಸಿ ಬಿದ್ದ ನಾನು ನನ್ನ ಒಂದು ಹಲ್ಲನ್ನು ಮುರಿದುಕೊಂಡದ್ದು ನನ್ನ ಕ್ರೀಡಾ ಬದುಕಿನ ಮಹತ್ತರವಾದ ನೆನಪು. ಏಳು ಮತ್ತು 10ನೇ ತರಗತಿಯಲ್ಲಿ ನಾನು ನಮ್ಮ ಶಾಲೆಯ ಕೋಕೋ ಆಟದ ಕ್ಯಾಪ್ಟನ್ ಆಗಿ ತಂಡವನ್ನು ಮುನ್ನಡೆಸಿದ್ದೆ .ಆರು ಮತ್ತು ಏಳನೇ ತರಗತಿಯಲ್ಲಿ ಫೋರ್ ಇಂಟು ಹಂಡ್ರೆಡ್ ರಿಲೇ ಕ್ರೀಡಾಕೂಟದಲ್ಲಿ ಕೂಡ ನಾನು ಜಿಲ್ಲಾ ಮಟ್ಟದವರೆಗೆ ಹೋಗಿ ಬಂದಿದ್ದೇನೆ. 9 ಮತ್ತು 10ನೇ ತರಗತಿಯಲ್ಲಿ ಕೋ ಕೋ ಆಟದ ಜೊತೆಗೆ ವಾಲಿಬಾಲ್ ಆಟದಲ್ಲಿ ಪಾಲ್ಗೊಂಡು ಜಿಲ್ಲಾ ಮಟ್ಟದಲ್ಲಿ ಪಾಲ್ಗೊಂಡಿದ್ದೇನೆ. ಕೇವಲ ಒಂದು ಬಾರಿ ಮಾತ್ರ ವಿಭಾಗ ಮಟ್ಟಕ್ಕೆ ಆಡಲು ಹೋಗಿದ್ದು ಸಂತಸದ ವಿಷಯವಾಗಿತ್ತು.

ನಮಗೆ ಐದು ಆರು ಮತ್ತು ಏಳನೇ ತರಗತಿಗೆ ಪ್ರಾಣೇಶ್ ಸರ್ ಎಂಬ ಅತ್ಯಂತ ಖಡಕ್ ಶಿಕ್ಷಕರು ಇದ್ದರು. ಅತ್ಯಂತ ಕಟ್ಟುನಿಟ್ಟಿನ ತರಬೇತಿ ನೀಡುತ್ತಿದ್ದ ಅವರು ಸದಾ ಹೊಸತನ್ನು ಕಲಿಸುವ ಹುಮ್ಮಸ್ಸನ್ನು ಹೊಂದಿದ್ದರು. ಅವರ ಕೈಯಲ್ಲಿ ನಾವು ಭಾರತ ಸೇವಾದಳದ ಸದಸ್ಯರಾಗಿದ್ದೆವು. ಶಿಸ್ತಿನ ಕವಾಯತು ಪರೇಡ್ಗಳು ನಮ್ಮ ಮುಂದಿನ ಬದುಕಿನಲ್ಲಿ ಕೂಡ ಅತ್ಯುತ್ತಮವಾದ ಶಿಸ್ತನ್ನು ಅಳವಡಿಸಿಕೊಳ್ಳಲು ಸಾಧ್ಯವಾಯಿತು. ಹಿಂದಿ ಲೇಜಿಮ್, ಘಾಟಿ ಲೇಜಿಮ್ ಎಂದು ಎರಡು ಬೇರೆ ವಿಧದ ಲೆಜಿಮ್ ಗಳನ್ನು ಮಾಡುತ್ತಾ ನಮ್ಮ ರಾಷ್ಟ್ರದ ಲಾಂಛನಗಳನ್ನು ರಾಷ್ಟ್ರಧ್ವಜದ ಮಾದರಿಯನ್ನು ಮಾಡುತ್ತಾ ನಾವು ಸ್ವಾತಂತ್ರ್ಯ ದಿನದಂದು ಕಾರ್ಯಕ್ರಮ ನೀಡುತ್ತಿದ್ದರೂ ಕಣ್ಣು ಮುಂದೆ ಕಟ್ಟಿದಂತಿದೆ.


ಆಗ ನಮ್ಮನ್ನು ಜಿಲ್ಲಾಮಟ್ಟದ ಆಟಗಳಿಗೆ ಕರೆದೊಯ್ದರೂ ಕೂಡ ಮೂಲಭೂತ ಸೌಲಭ್ಯಗಳನ್ನು ಹೊಂದಿರದ ಶಾಲೆಗಳಲ್ಲಿ ವಸತಿ ವ್ಯವಸ್ಥೆಯನ್ನು ಮಾಡಿರುತ್ತಿದ್ದರು. ಎಲ್ಲಾ ರೀತಿಯ ಸವಲತ್ತುಗಳನ್ನು ಹೊಂದಿರದಿದ್ದರೂ ಇದ್ದುದರಲ್ಲಿಯೇ ಹೊಂದಿಕೊಂಡು ಆಟವಾಡಿ ಬರುತ್ತಿದ್ದ ನಮಗೆ ಅಲ್ಲಿ ಕೊರತೆಯ ಭಾವ ಕಾಣುತ್ತಲೇ ಇರಲಿಲ್ಲ. ಇನ್ನು ನಮಗೆ ಕೊಡುತ್ತಿದ್ದ ಊಟ ಕೂಡ ಅಷ್ಟೇನೂ ರುಚಿಕರವಾಗಿ ಇರದಿದ್ದರೂ ಕೂಡ ಹೊಂದಿಕೊಂಡು ಹೋಗುವ ಸ್ವಭಾವ ನಮ್ಮದಾಗಿರುತ್ತಿತ್ತು. ಬಹುಶಹ ಕ್ರೀಡೆ ನಮಗೆ ಕಲಿಸಿದ ಪಾಠಗಳು ನೂರೆಂಟು. ಎಲ್ಲವನ್ನು ಏಕ ಚಿತ್ತದಿಂದ ಸ್ವೀಕರಿಸುವ, ಹೊಂದಾಣಿಕೆಯ ಸ್ವಭಾವ ಹಾಗೂ ಸಮಾಧಾನದ ಗುಣವನ್ನು ಕ್ರೀಡೆ ನಮಗೆ ಕಲಿಸಿತ್ತು. ಇದರ ಜೊತೆಗೆ ಕ್ರೀಡೆಯ ಸ್ಫೂರ್ತಿ ಅದ್ಭುತವಾಗಿತ್ತು. ಸೋತಾಗ ಮನಸ್ಸಿಗೆ ಕೊಂಚ ಬೇಸರವಾದರೂ ಮತ್ತೆ ಅದೇ ಹುಮ್ಮಸ್ಸಿನಿಂದ ಆಟದಲ್ಲಿ ಪಾಲ್ಗೊಳ್ಳುವ ಮನಸ್ಥಿತಿ ನಮ್ಮದಾಗಿತ್ತು. ಸಾಂಘಿಕ ಬದುಕಿನ ಪಾಠ ನಮಗೆ ಕ್ರೀಡೆಯಿಂದಲೇ ದೊರೆತಿತ್ತು ಎಂಬುದು ನಿರ್ವಿವಾದದ ಸಂಗತಿ. ಆದರೆ ನಮಗೆ ಐದು ಆರು ಏಳನೇ ತರಗತಿಯಲ್ಲಿ ಎರಡನೇ ಪಿರಿಯಡ್ನಿಂದನೆ ತರಬೇತಿ ನೀಡುತ್ತಾ ಇದ್ರು. ಜಿಲ್ಲಾ ಮಟ್ಟದಲ್ಲಿ ಸೋತು ಮನೆಗೆ ಬಂದ್ರೆ ತರಗತಿಯಲ್ಲಿ ಕೂತಾಗ ಅಲ್ಲಿ ಹೇಳಿಕೊಡುವ ಪಾಠಗಳು ಒಂಚೂರು ಅರ್ಥವಾಗುತ್ತಿರಲಿಲ್ಲ.

6ನೇ ತರಗತಿಯಲ್ಲಿ 600 ಅಂಕಕ್ಕೆ 366 ಅಂಕಗಳನ್ನು ತೆಗೆದುಕೊಂಡು ಫಸ್ಟ್ ಕ್ಲಾಸ್ ಬಂದಾಗಲೂ ಕೂಡ (ಮುಂಚೆ ಐದನೇ ತರಗತಿಯಲ್ಲಿ 500 ಕ್ಕೆ 485 ಅಂಕಗಳನ್ನು ಪಡೆದಿದ್ದೆ ) ನಮ್ಮ ಗೋದಾವರಿ ಟೀಚರ್ ನನಗೆ ಬರ ಬರ್ತಾ ರಾಯರು ಕುದುರೆ ಕತ್ತೆ ಆಯ್ತು ಅಂತ ಹೇಳಿದ್ರು ಇನ್ನಷ್ಟು ಮತ್ತಷ್ಟು ಆಟಕ್ಕೆ ಸೇರ್ಕೊ. ಪರೀಕ್ಷೆಯಲ್ಲಿ ಗೋತ ಹೊಡಿತೀರಿ ಎಂದು ಹೇಳುತ್ತಿದ್ದರು.... ಇದನ್ನೇ ಸವಾಲ್ ಆಗಿ ಸ್ವೀಕರಿಸಿದ ನಾನು ಪ್ರತಿಯೊಂದು ಪಾಠವನ್ನು ಒಂದೊಂದಾಗಿ ಅಭ್ಯಾಸ ಮಾಡುತ್ತಾ ಆಟ ಮತ್ತು ಪಾಠಗಳಲ್ಲಿ ಪಾಲ್ಗೊಳ್ಳುತ್ತಲೇ ಒಳ್ಳೆಯ ಅಂಕಗಳನ್ನು ಪಡೆಯುತ್ತಿದ್ದೆ. 8 9 ಮತ್ತು 10ನೇ ತರಗತಿಗೆ ಕರಮುಡಿ ಸರ್ ಎಂಬ ಶಿಕ್ಷಕರು ಇದ್ದರು.

8 9 10ನೇ ತರಗತಿಯಲ್ಲಿ ಶಾಲೆಯ ಅವಧಿಗೆ ಒಂದು ಗಂಟೆ ಮೊದಲೇ ತರಬೇತಿ ಪಡೆಯಲು ಶಾಲೆಗೆ ಬರಲು ಹೇಳುತ್ತಿದ್ದರು ಹಾಗೂ ಒಂದು ಗಂಟೆ ತಡವಾಗಿ ಮನೆಗೆ ಹೋಗಲು ಹೇಳಿ ತರಬೇತಿ ನೀಡುತ್ತಿದ್ದರು. ಇದರಿಂದ ನಮ್ಮ ವಿದ್ಯಾಭ್ಯಾಸಕ್ಕೆ ಯಾವುದೇ ತೊಂದರೆ ಆಗಲಿಲ್ಲ. ನನ್ನ ಕ್ರೀಡಾ ಬದುಕಿನಿಂದ ನನ್ನ ವಿದ್ಯಾಭಾಸಕ್ಕೆ ಎಂದಿಗೂ ತೊಂದರೆಯಾಗಬಾರದು ಎಂಬುದನ್ನು ಚಾಲೆಂಜ್ ಆಗಿ ತೆಗೆದುಕೊಂಡು ನಾನು ಶಾಲೆಯ ಅಭ್ಯಾಸ ಮತ್ತು ಆಟೋಟಗಳು ಎರಡನ್ನು ಬ್ಯಾಲೆನ್ಸ್ ಮಾಡ್ದೆ. ಕನ್ಸಿಸ್ಟಂಟಾಗಿ ಪ್ರತಿ ತರಗತಿಯಲ್ಲಿ ಹೆಚ್ಚು ಅಂಕಗಳನ್ನ ಪಡಿತಾ ಸ್ವಯಂ ಓದಿನ ಕಡೆ ಗಮನಹರಿಸಿದೆ. ಪರಿಣಾಮವಾಗಿ ಹತ್ತನೇ ತರಗತಿ ಪ್ರಿಲಿಮ್ಸ್ ನಲ್ಲಿ 85% ಅಂಕ ಪಡೆದೆ.

ಆದರೆ ಮುಖ್ಯ ಪರೀಕ್ಷೆಯಲ್ಲಿ 74 ಪ್ರತಿಶತ (625 ಕ್ಕೆ 422) ಮಾತ್ರ ಪಡೆಯಲು ಸಾಧ್ಯವಾಯಿತು. ನನಗೆ ಎಲ್ಲಾ ಬರ್ತಾ ಇತ್ತು ಅನ್ನೋದೇ ನನ್ನ ನಿರ್ಲಕ್ಷಕ್ಕೆ ಕಾರಣವಾಗಿ ಮೇನ್ಸ್ ನಲ್ಲಿ 74% ಮಾತ್ರ ಅಂಕ ಪಡೆದೆ. ಆಟಗಳು ನಮಗೆ ಕಲಿಸಿದ್ದು ಬಹಳ ಇದೀಗ ಬೇರೆಯವರ ಜೀವನಕ್ಕೆ ಹೋಲಿಸಿ ನೋಡಿದರೆ ಆಟದ ಮೂಲಕ ನಾವು ಸಾಕಷ್ಟು ಪಾಠಗಳನ್ನು ಕಲಿತ ವಿಷಯವನ್ನು ನನ್ನ ಸ್ನೇಹಿತರೊಂದಿಗೆ ಬಹಳಷ್ಟು ಬಾರಿ ನಾನು ಹಂಚಿಕೊಂಡಿದ್ದೇನೆ. ಆಟವಾಡಿದ ಪ್ರತಿಯೊಬ್ಬ ವ್ಯಕ್ತಿಗೂ ಸ್ಪರ್ಧೆಯ ಪ್ರಾಮುಖ್ಯತೆಯನ್ನು ತಿಳಿದಿರುತ್ತಾನೆ. ನಿರಂತರ ಪ್ರಯತ್ನ ಕಠಿಣ ಶಿಸ್ತುಗಳಿಗೆ ಒಳಪಟ್ಟು ಬದುಕುವುದನ್ನು ರೂಢಿಸಿಕೊಂಡಿರುತ್ತಾನೆ. ಸೋಲು ಗೆಲುವುಗಳಿಗೆ ಆತ ಎಂದಿಗೂ ಅಂಜುವುದಿಲ್ಲ ಸೋಲನ್ನು ಅತ್ಯಂತ ಸ್ಪರ್ಧಾತ್ಮಕವಾಗಿ ಸ್ವೀಕರಿಸಿ ಗೆಲುವನ್ನು ಕೂಡ ಸಮಚಿತ್ತದಿಂದ ಸಂಭ್ರಮಿಸುವ ಮನಸ್ಥಿತಿ ಪ್ರತಿಯೊಬ್ಬ ಕ್ರೀಡಾಳುವಿನದಾಗಿರುತ್ತದೆ. ನಿಜ ಹೇಳಬೇಕೆಂದರೆ ಕನಿಷ್ಠ ಎರಡು–ಮೂರು ವರ್ಷಗಳ ಕಾಲ ಮಕ್ಕಳನ್ನು ವಿವಿಧ ಬಗೆಯ ಸ್ಪರ್ಧೆಗಳಿಗೆ ಕಳಿಸಿ ಎಂದು ನಾನು ಪಾಲಕರಿಗೆ ಸಲಹೆ ಜೊತೆಗೆ ಒತ್ತಾಯವನ್ನು ಕೂಡ ಮಾಡುತ್ತೇನೆ.

ಕಾರಣ ಎಲ್ಲವನ್ನು ಅತ್ಯಂತ ಕ್ರೀಡಾ ಮನೋಭಾವದಿಂದ ತೆಗೆದುಕೊಳ್ಳುವ ಮನೋಭಾವ ನಾವು ಕ್ರೀಡಾಳುಗಳಲ್ಲಿ ಇರುತ್ತದೆ. ಇನ್ನು ಆಟೋಟಗಳಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬ ವ್ಯಕ್ತಿಯು ತನ್ನ ಮನದ ಕೆಚ್ಚು ಅಭಿಮಾನ ರೋಷ ಸಿಟ್ಟು ಸೆಡವುಗಳನ್ನು ತನ್ನ ಆಟದಲ್ಲಿ ತೋರಿಸಿದ್ದು ಮಳೆ ಸುರಿದು ಹಗುರವಾದ ಮುಗಿಲಿನಂತೆ ಶುಭ್ರ ನಿರಭ್ರನಾಗಿರುತ್ತಾನೆ. ಆತನಲ್ಲಿ ಸದಾ ತನ್ನ ದೇಶ ರಾಜ್ಯ ಹಾಗೂ ಶಾಲೆ ಕಾಲೇಜುಗಳ ಕುರಿತ ಅಭಿಮಾನ ಜಾಗೃತವಾಗಿರುತ್ತದೆ. ಆಟದಲ್ಲಿ ಸೋಲು ಗೆಲುವುಗಳನ್ನು ಸಮಚಿತ್ತದಿಂದ ಸ್ವೀಕರಿಸಿದ ಆತ ಬದುಕಿನಲ್ಲಿ ಕೂಡ ಇದೇ ನಿಲುವುಗಳನ್ನು ಅಳವಡಿಸಿಕೊಂಡು ಮುಂದೆ ಸಾಗುತ್ತಾನೆ. ಆದ್ದರಿಂದಲೇ ನಮ್ಮ ಹಿರಿಯರು ಹೇಳಿರುವುದು ಕ್ರೀಡೆ ಇಲ್ಲದ ಬದುಕು ಕೀಡೆಯಂತೆ ಎಂದು ಆಟಗಳಲ್ಲಿ ಪಾಲ್ಗೊಳ್ಳಿ, ನಿಮ್ಮ ಮಕ್ಕಳಿಗೂ ಇಂತಹ ಅವಕಾಶ ನೀಡಿ...




ವೀಣಾ ಹೇಮಂತ್ ಗೌಡ ಪಾಟೀಲ, ಮುಂಡರಗಿ ಗದಗ.

# ರಿಯಲ್ ಎಸ್ಟೇಟ್ ಗೆ ಕೈ ಸರ್ಕಾರ ಆದ್ಯತೆ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರದ ಪ್ರಮುಖ ಆದ್ಯತೆ ರಿಯಲ್ ಎಸ್ಟೇಟ್ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಶಾಸಕ ಬಿ.ವೈ. ವಿಜಯೇಂದ್ರ ಅವರು ಆರೋಪಿಸಿದ್ದಾರೆ. ಬೆಂಗಳೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಡಿ.ಕೆ. ಶಿವಕುಮಾರ್ ಅವರು ಅಧಿಕಾರ ಸ್ವೀಕರಿಸಿದ ಕೆಲವೇ ಗಂಟೆಗಳಲ್ಲಿ ತಮ್ಮ ಸರ್ಕಾರದ ಆದ್ಯತೆ ರಿಯಲ್ ಎಸ್ಟೇಟ್ ಎಂಬುದನ್ನು ತೋರಿಸಿದ್ದಾರೆ. ಈ ಸರ್ಕಾರಕ್ಕೆ ರೈತರ ಮೇಲೆ ಕಾಳಜಿಯಿಲ್ಲ.**

ಬಿಡದಿಯಲ್ಲಿ ಟೌನ್‌ಶಿಪ್ ಮಾಡಲು ಮುಂದಾಗಿರುವ ಸರ್ಕಾರ ಬಲಾತ್ಕಾರವಾಗಿ ಅಕ್ರಮವಾಗಿ ರೈತರ ಜಮೀನು ಕಸಿಯಲು ಮುಂದಾಗಿದೆ. ಇದನ್ನು ಬಿಜೆಪಿ ವಿರೋಧಿಸಲಿದೆ. ಆದ್ದರಿಂದ ಇಂತಹ ಕೆಲಸವನ್ನು ಸರ್ಕಾರ ಕೈಬಿಡಬೇಕು ಎಂದು ಒತ್ತಾಯಿಸಿದರು. ಅನ್ನದಾತರಿಗೆ ಈ ಸರ್ಕಾರ ನೆರವಾಗಬೇಕಿತ್ತು. ಆದರೆ ದುರದೃಷ್ಟವೆಂದರೆ ಬೆಂಗಳೂರಿನ ರಿಯಲ್ ಎಸ್ಟೇಟ್ ಸರ್ಕಾರಕ್ಕೆ ಮುಖ್ಯವಾಗಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಭಂಡತನ ಬಿಟ್ಟು ರೈತರ ಸಮಸ್ಯೆಗಳನ್ನು ಆಲಿಸಬೇಕು.



ಅವರನ್ನು ಒಕ್ಕಲೆಬ್ಬಿಸಬಾರದು. ಟೌನ್‌ಶಿಪ್‌ಗಾಗಿ ಭೂಸ್ವಾಧೀನವನ್ನು ನಿಲ್ಲಿಸಬೇಕು ಎಂದರು.

ಗ್ಯಾರಂಟಿ ಅನುಷ್ಠಾನ ಸಮಿತಿ ಕತ್ತೆ ಕಾಯುತ್ತಿದೆಯೇ : ಗ್ಯಾರಂಟಿಗಳಲ್ಲಿ ಅಕ್ರಮ ಆಗೋವರೆಗೆ ಅನುಷ್ಠಾನ ಸಮಿತಿಗಳು ಕತ್ತೆ ಕಾಯುತ್ತಿದ್ದವೇ. ಒಂದೂವರೆ ಲಕ್ಷಕ್ಕೂ ಹೆಚ್ಚು ಜನರು ಆದಾಯ ತೆರಿಗೆ ಪಾವತಿ ಮಾಡುವವರು ಗೃಹ ಲಕ್ಷ್ಮಿ ಪಡೆಯುತ್ತಿದ್ದಾರೆ ಎಂದು ಅನುಷ್ಠಾನ ಸಮಿತಿ ಹೇಳಿದೆ. ಗ್ಯಾರಂಟಿ ಜಾರಿ ಮಾಡುವಾಗ ಕಾಕಾ ಪಾಟೀಲ್, ಮಹಾದೇವಪ್ಪಗೆ ಫ್ರೀ ಎಂದಿದ್ದರು. ಈಗ ಹೇಗೆ ಅವರೆಲ್ಲ ತೆ-ರಿಗೆ ಪಾವತಿದಾರರಾಗುತ್ತಾರೆ ಎಂದು ಕೇಳಿದರು. ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷ-ರಿಗೆ ಸಚಿವ ಸಂಪುಟ ದರ್ಜೆ ನೀಡಲಾಗಿದೆ. ಜಿಲ್ಲೆಯಲ್ಲಿ ಅಧ್ಯಕ್ಷರಿದ್ದಾರೆ.

ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಅನುಷ್ಠಾನ ಸಮಿತಿ ಇದೆ. ಇವರೆಲ್ಲ ಕತ್ತೆ ಕಾಯುತ್ತಿದ್ದಾರೆಯೇ ಎಂದು ವ್ಯಂಗ್ಯವಾಡಿದರು. ಗ್ಯಾರಂಟಿಗಳಿಂದ ಸರ್ಕಾರಕ್ಕೆ ಈಗ ಹೊರೆ ಆಗ್ತಾ ಇದೆ. ಸಮಿತಿಗಳಿಗೆ, ಅಧ್ಯಕ್ಷರಿಗೆ ಕಚೇರಿ, ವೇತನ, ಇತರ ಸೌಲಭ್ಯಗಳಿಗೆ ನೂರಾರು ಕೋಟಿ ವ್ಯಯಿಸಲಾಗುತ್ತಿದೆ. ಇದು ಸರ್ಕಾರದ ವೈಫಲ್ಯ. ಗ್ಯಾರಂಟಿಗಳಿಗೆ ಹಣ ಹೊಂದಿಸಲು ಸಾಧ್ಯವಾಗದೇ ಒಂದೊಂದೆ ನೆಪ ಹೇಳಿಕೊಂಡು ಈಗ ಸೌಲಭ್ಯಗಳಿಗೆ ಕತ್ತರಿ ಹಾಕ್ತ ಇದ್ದಾರೆ. ಇದಕ್ಕೆ ರಾಜ್ಯದ ಜನ ಛೀಮಾರಿ ಹಾಕ್ತ ಇದ್ದಾರೆ ಎಂದರು. ರಾಜ್ಯ ಸರ್ಕಾರವೇ ಎಸ್‌ಐಆರ್ ವಿಚಾರದಲ್ಲಿ ದ್ವಂದ್ವ ನಿಲುವು ತೋರಿಸುತ್ತಿದೆ. ಅಧಿಕಾರಿಗಳನ್ನು ಎತ್ತಿಕಟ್ಟುವ ಕೆಲಸ ಮಾಡಲಾಗುತ್ತಿದೆ. ಬಿಎಲ್‌ಒಗಳಿಗೆ ರಾಜ್ಯ ಸರ್ಕಾರ ಕುಮ್ಮಕ್ಕು ನೀಡುತ್ತಿದೆ ಎಂದು ದೂರಿದರು.

ಕಾಂಗ್ರೆಸ್‌ನ ಮಹಾನ್ ನಾಯಕ ರಾಹುಲ್ ಗಾಂಧಿ ಅವರು ಬೇರೆ ದೇಶ ನೈಜ ಪೌರತ್ವ ಪಡೆದಿದ್ದಾರೆ. ಇನ್ನೊಂದು ದೇಶದ ಪೌರತ್ವ ಇಟ್ಟುಕೊಂಡು ಅಕ್ರಮವಾಗಿ ಸುಳ್ಳು ಮಾಹಿತಿ ನೀಡಿದ್ದಾರೆ. ಇದರ ಬಗ್ಗೆ ಡಿ.ಕೆ. ಶಿವಕುಮಾರ್ ಹಾಗೂ ಪ್ರಿಯಾಂಕ್ ಖರ್ಗೆ ಅವರು ಬೆಳಕು ಚೆಲ್ಲುವ ಕೆಲಸವನ್ನು ಮಾಡಲಿ ಎಂದರು. ಚುನಾವಣಾ ಆಯೋಗ ಅಕ್ರಮ ವಲಸಿಗರ ಪತ್ತೆಗೆ, ಮತಪಟ್ಟಿಯಲ್ಲಿ ಎರಡು ಕಡೆ ಹೆಸರು ಇದ್ದರೆ, ಮೃತಪಟ್ಟವರ ಹೆಸರು ಸೇರಿದ್ದರೆ ಸರಿಪಡಿಸಲು ಎಸ್‌ಐಆರ್ ಮಾಡುತ್ತಾ ಇದೆ. ಸಾಂವಿಧಾನಿಕ ಸಂಸ್ಥೆ ವಿರುದ್ಧ ಅಧಿಕಾರಿಗಳನ್ನು, ಜನರನ್ನು ಎತ್ತಿಕಟ್ಟುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ. ಇದು ಅಕ್ಷಮ್ಯ ಅಪರಾಧ ಎಂದರು.

ರಾಜ್ಯ ಸರ್ಕಾರ ಸುಧಾರಣೆಗಳನ್ನು ಮಾಡಲಿ. ಗ್ಯಾರಂಟಿಗಳಿಗೆ ಹಣ ಹೊಂದಿಸಲು ಫಲಾನುಭವಿಗಳಿಗೆ ಕತ್ತರಿ ಹಾಕುತ್ತಿದ್ದೇವೆ ಎಂಬ ಸತ್ಯವನ್ನು ಜನರ ಮುಂದೆ ಮುಚ್ಚಿಡಲಿ. ಈ ಸರ್ಕಾರದ ಯೋಗ್ಯತೆಗೆ ಮೂರು ವರ್ಷದಲ್ಲಿ ಜನರಿಗೆ ಮನೆ ನೀಡಲಿಲ್ಲ. ರೈತರ ಸಂಕಷ್ಟಕ್ಕೆ ಸ್ಪಂದಿಸಲಿಲ್ಲ, ಗಂಗಾ ಕಲ್ಯಾಣ ಅಕ್ರಮ ತನಿಖೆ ಮಾಡಲಿಲ್ಲ. ಹೈನುಗಾರಿಕೆಗೆ ಪ್ರೋತ್ಸಾಹ ಧನ ನೀಡಲಿಲ್ಲ ಎಂದು ಹೇಳಿದರು. ಆರೆಸ್‌ಎಸ್ ಬಗ್ಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಒಂದಲ್ಲ ಒಂದು ಹೇಳಿಕೆ ಪ್ರತಿದಿನ ನೀಡುತ್ತಾ ಇದ್ದಾರೆ. ಅವರ ಬಾಯಿ ಚಪಲಕ್ಕೆ ಉತ್ತರ ಕೊಡಲ್ಲ. ಅವರು ರಾಜ್ಯದ ಗೃಹ ಸಚಿವರು. ಅವರು ಮಾಡಬೇಕಾದ ಕೆಲಸ ತುಂಬಾ ಇವೆ. ಅಕ್ರಮ ನುಸುಳುಕೋರರು, ಲವ್ ಜಿಹಾದ್, ಹಿಂದೂ ಕಾರ್ಯಕರ್ತರ ಹತ್ಯೆ ಬಗ್ಗೆ ಗಮನ ಹರಿಸಲಿ. ಅದನ್ನು ಬಿಟ್ಟು ಬೇರೆ ಮಾತನಾಡುತ್ತಾರೆ ಎಂದರು.

## ಸೌಹಾರ್ದತೆಯಿಂದ ಮೊಹರಂ ಆಚರಿಸಿ: ಎಸ್ .ಮಂಜುನಾಥ ಪಿಐ

ಅ.ಶ. ಸುದ್ದಿ ಅರಕೇರಾ

**ಅರಕೇರಾ: ಹಿಂದು ಮುಸ್ಲಿಂ ಸೌಹಾರ್ದಕ್ಕೆ ಹೆಸರಾಗಿರುವ ಅರಕೇರಾ ಪಟ್ಟಣದಲ್ಲಿ ಮೊಹರಂವನ್ನು ಹಿರಿಯರ ಸಮ್ಮುಖದಲ್ಲಿ ಎಲ್ಲರೂ ಶಾಂತಿಯುತವಾಗಿ ಆಚರಿಸಬೇಕು ಎಂದು ದೇವದುರ್ಗ ಪೋಲಿಸ್ ಠಾಣೆಯ ಠಾಣೆಯ ಅಧಿಕಾರಿ ಎಸ್ ಮಂಜುನಾಥ ಪಿಐ ಹೇಳಿದರು. ದೇವದುರ್ಗ ಪೋಲಿಸ್ ಠಾಣೆಯವತಿಯಿಂದ ಮೊಹರಂ ಹಬ್ಬದ ಅಂಗವಾಗಿ ಮಂಗಳವಾರ ಸಂಜೆ ಛವಡಿ ಕಟ್ಟೆಯಲ್ಲಿ ಶಾಂತಿ ಸಭೆಯನ್ನು ಜರುಗಿತು ಸಭೆಯಲ್ಲಿ ಮಾತನಾಡಿದ ಅವರು ನಮ್ಮ ದೇಶದಲ್ಲಿ ಹಬ್ಬಗಳು ಭಾವೈಕ್ಯತೆ ಸಂಕೇತವಾಗಿವೆ.**



ಮೊಹರಂ ಹಬ್ಬವು ತ್ಯಾಗ ಪ್ರತಿಕವಾದ ಹಬ್ಬದಲ್ಲಿ ಭಕ್ತಿ ಇರಬೇಕು.ಅನ್ಯಧರ್ಮದ ಆಚರಣೆಗಳನ್ನು ಗೌರವದಿಂದ ಕಾಣಬೇಕು ಹಿಂದೂ- ಮುಸ್ಲಿಂ ಎನ್ನುವ ಭೇದ-ಭಾವವಿಲ್ಲದೇ ಆಚರಿಸುವ ಹಬ್ಬವಾಗಿದ್ದು. ಮೊಹರಂ ಹಬ್ಬದಲ್ಲಿ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಹಿಸುವ ಜತೆಗೆ ಇಡೀ ಹಬ್ಬದಲ್ಲಿ ಗುಂಪುಗೂಡಿ ಹಲಗೆ ವಾದ್ಯಕ್ಕೆ ಅಲಾಯಿ ಕುಣಿತ ಕುಣಿಯುವುದು. ಯಾವುದೇ ಧರ್ಮಕ್ಕೆ ಧಕ್ಕೆ ತರುವಂತಹ ಅಥವಾ ಪ್ರಚೋದನಕಾರಿ ಸಂದೇಶಗಳನ್ನು ಸಾಮಾಜಿ-ಕ ಜಾಲತಾಣದಲ್ಲಿ ಹಂಚಿಕೊಳ್ಳಬಾರದು ಎಂದು ತಿಳಿಸಿದರು. ಕಾನೂನು ಸುವ್ಯವಸ್ಥೆ ಕಾಪಾಡಲು ಪೋಲಿಸ್ ಇಲಾಖೆ ಸದಾ ಸಿದ್ದವಾಗಿದ್ದು ಯಾವದೇ ಅಹಿತಕರ ಘಟನೆ ಆಗದಂತೆ ಶಾಂತತೆಯಿಂದ ಮೊಹರಂ ಹಬ್ಬ ಆಚರಿಸುವಂತೆ ಎಸ್ ಮಂಜುನಾಥ ಪಿಐ ಹೇಳಿದರು. ಸಂಧರ್ಬದಲ್ಲಿ ಸತ್ಯನಾರಾಯಣನಾಯಕ ಪೋಲಿಸ್ ಪಾಟೀಲ್ ಮಾಜಿ ಜಿಲ್ಲಾ ಪಂಚಾಯತ ಸದಸ್ಯರು ಗ್ರಾಮದ ಮುಖಂಡರು. ಸೀತಣ್ಣನಾಯಕ ಗುರಿಕಾರ ಪ್ರಥಮದರ್ಜೆ ಗುತ್ತೇದಾರ ತಿಮ್ಮಪ್ಪನಾಯಕ ಪೋಲಿಸ್ ಪಾಟೀಳ್ ಮಾಜಿ ಗ್ರಾಮ ಪಂಚಾಯತ ಅಧ್ಯಕ್ಷರು,ಚಂದ್ರಶೇಖರಶೆಟ್ಟಿ, ಸುರೇಶಗೌಡಮಾಲಿಪಾಟೀಲ್,ವರದರಾಜನಾಯಕದೊರೆ, ಅಲಿಂಖಾಜಿಗುರುಗಳು, ಬಾಷವೈಲ್ಡಿಂಗ ಉಪಸ್ಥಿತರಿದ್ದರು.ಮೊಹರಂ ಹಬ್ಬದ ಶಾಂತಿ ಸಭೆಯಲ್ಲಿ ಪಟ್ಟಣದಲ್ಲಿ 9 ಮಸೀದಿಯ ಪ್ರಮುಖರು ಭಾಗವಹಿಸಿದ್ದರು.

# ಕೆಐಎಡಿಬಿ ಭೂ ಸ್ವಾಧೀನ ವಿವಾದ

## ಶಿಡ್ಲಘಟ್ಟದಲ್ಲಿ ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ

ಅ.ಶ. ಸುದ್ದಿ ಶಿಡ್ಲಘಟ್ಟ

**ಶಿಡ್ಲಘಟ್ಟ: ಜಂಗಮಕೋಟೆ ಹೋಬಳಿಯ 13 ಹಳ್ಳಿಗಳ ಕೆಐಎಡಿಬಿ ಭೂ ಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದಂತೆ ಪರ-ವಿರೋಧದ ಹೋರಾಟಗಳು ತಾರಕಕ್ಕೇ-ರಿದ್ದು, ಬುಧವಾರದಂದು ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಕೋಡಿಹಳ್ಳಿ ಚಂದ್ರಶೇಖರ್ ಬಣ ಭಕ್ತರಹಳ್ಳಿ ಬೈರೇಗೌಡ ಸೇರಿದಂತೆ ಹಲವು ರೈತರ ಬಂಧನವನ್ನು ಖಂಡಿಸಿ ಶಿಡ್ಲಘಟ್ಟದಲ್ಲಿ ಚಿಕ್ಕಬಳ್ಳಾಪುರ - ಚಿಂತಾಮಣಿ ರಾಷ್ಟ್ರೀಯ ಹೆದ್ದಾರಿಯನ್ನು ತಡೆದು ರೈತರು ಬೃಹತ್ ಪ್ರತಿಭಟನೆ ನಡೆಸಿದರು.**

ಬೆಂಗಳೂರಿನ ಕೆಐಎಡಿಬಿ ಕಚೇರಿ ಬಳಿ ಭೂ ಸ್ವಾಧೀನ ವಿರೋಧಿಸಿ ಪ್ರತಿಭಟನೆ




ತೆರಳಿದ್ದ ಭಕ್ತರಹಳ್ಳಿ ಬೈರೇಗೌಡರ ನೇತೃತ್ವದ ರೈತರ ನಿಯೋಗವನ್ನು ಪೊಲೀಸರು ಬಂಧಿಸಿದ್ದನ್ನು ಖಂಡಿಸಿ, ಕರ್ನಾಟಕ ರಾಜ್ಯ ರೈತ ಸಂಘದ ಶಿಡ್ಲಘಟ್ಟ ತಾಲ್ಲೂಕು ಅಧ್ಯಕ್ಷ ತಾದೂರು ಮಂಜುನಾಥ್ ಹಾಗೂ ತಾಲ್ಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ರೈತ ಮುಖಂಡ ನಾರಾಯಣಸ್ವಾಮಿ ನೇತೃತ್ವದಲ್ಲಿ ನೂರಾರು ರೈತರು ರಸ್ತೆಗಿಳಿದು ಆಕ್ರೋಶ ವ್ಯಕ್ತಪಡಿಸಿದರು.

ರಸ್ತೆ ತಡೆ :ಸಾರ್ವಜನಿಕರ ಪರದಾಟ. ಬಂಧಿತ ರೈತರನ್ನು ತಕ್ಷಣವೇ ಬಿಡುಗಡೆ ಮಾಡಬೇಕೆಂದು ಆಗ್ರಹಿಸಿ ಸತತ ಮೂರು ಗಂಟೆಗಳ ಕಾಲ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳನ್ನು ತಡೆದು ರೈತರು ಧರಣಿ ನಡೆಸಿದರು. ಇದರಿಂದಾಗಿ ಹೆದ್ದಾರಿಯಲ್ಲಿ ಕಿಲೋಮೀಟರ್‌ಗಟ್ಟಲೆ ವಾಹನಗಳು ಸಾಲುಗಟ್ಟಿ ನಿಂತಿದ್ದು, ಸಾರ್ವಜನಿಕರು ಹಾಗೂ ಪ್ರಯಾಣಿಕರು ತೀವ್ರ ತೊಂದರೆ ಅನುಭವಿಸುವಂತಾಯಿತು. ಪೊಲೀಸರು ಪ್ರತಿಭಟನಕಾರರ ಮನವೊಲಿಸಿದ ಪ್ರತಿಭಟನೆ ಕೈಬಿಡಲಾಯಿತು.

# ಮೋದಿ-ಮೆಲೋನಿ ಫೇಮಸ್ ಕಪಲ್ ಅಂತೆ..!



ಅ.ಶ. ಸುದ್ದಿ ಪ್ಯಾರಿಸ್

**ಪ್ಯಾರಿಸ್: ಮೋದಿ ಮತ್ತು ನಾನು ಫೇಮಸ್ ಕಪಲ್ ಇದ್ದ ಹಾಗೇ ಎಂದು ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಹಾಸ್ಯ ಚಟಾಕಿ ಹಾ-ರಿಸಿದ್ದಾರೆ. ಕೆಲ ದಿನಗಳ ಹಿಂದೆ ಇಟಲಿ ಪ್ರವಾಸಕ್ಕೆ ತೆರಳಿದ್ದ ಮೋದಿ ಅವರು ಅಲ್ಲಿನ ಪ್ರಧಾನಿ ಜಾರ್ಜಿಯಾ ಮೆಲೋನಿ ಅವರಿಗೆ ಮೆಲೋಡಿ ಚಾಕೊಲೇಟ್ ಗಿಫ್ಟ್ ಕೊಟ್ಟಿದ್ದರು.**

ಈ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ಭಾರೀ ಸದ್ದು ಮಾಡಿತ್ತು. ಇದೀಗ ಜಿ7 ಶೃಂಗದಲ್ಲಿ ಮತ್ತೆ ಈ ಇಬ್ಬರು ಜಾಗತಿಕ ನಾಯಕರು ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡಿದ್ದಾರೆ. ಫ್ರಾನ್?ಸನ ಏವಿಯನ್-ಲೆ-ಬೈನ್ಸ್ ನಲ್ಲಿ ನಡೆಯುತ್ತಿರುವ ಜಿ7 ಶೃಂಗಸಭೆಯಲ್ಲಿ ಪ್ರಧಾನಿ ಮೋದಿ ಹಾಗೂ ಜಾರ್ಜಿಯಾ ಮೆಲೋನಿ ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ.


ಇದೇ ವೇಳೆ ಮೆಲೋನಿ ಅವರು ನಾವು ಇನ್‌ಸ್ಟಾಗ್ರಾಮ್‌ನಲ್ಲಿ ಫೇಮಸ್ ಕಪಲ್ ಅಂತ ಹೇಳಿದ್ದಾರೆ. ಅದಕ್ಕೆ ಮೋದಿ ನಗುತ್ತಾ ಪ್ರತಿಕ್ರಿಯಿಸಿರುವ ವಿಡಿಯೋ ಮೆಲೋಡಿ ಬಝ್ ಎಂದು ಸಾಮಾಜಿ-ಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಅಮೆರಿಕ ಇರಾನ್ ನಡುವಿನ ಮಹತ್ವದ ಒಪ್ಪಂದ ಸ್ವಾಗತಿಸಲು ಫ್ರಾನ್ಸ್ ನ ಎವಿಯನ್-ಲೆಸ್-ಬೇನ್ಸ್ ನಲ್ಲಿ 7 ರಾಷ್ಟ್ರಗಳ ಒಕ್ಕೂಟ (ಜಿ7) ನಾಯಕರು ಒಂದೆಡೆ ಸೇರಿದ್ದಾರೆ. ಈ ಮಧ್ಯೆ ಮೆಲೋನಿ ಮೋದಿ ನಡುವಿನ ಸಂಕ್ಷಿಪ್ತ ಮಾತುಕತೆ ಸಖತ್ ವೈರಲ್ ಆಗಿದೆ.

# ಮೊದಲ ಹ್ಯಾಟ್ರಿಕ್ ಗೋಲು ಬಾರಿಸಿ ಮೆಸ್ಸಿ ಮಿಂಚು : ಅಲ್ಜೀರಿಯಾ ವಿರುದ್ಧ ಅರ್ಜೆಂಟೀನಾ 3-0 ಗೆಲುವು

ಅ.ಶ. ಸುದ್ದಿ ಅಮೆರಿಕ

**ಕಾನ್ಸಾಸ್ ಸಿಟಿ (ಅಮೆರಿಕ): ಫುಟ್‌ಬಾಲ್ ದಿಗ್ಗಜ ಲಿಯೊನೆಲ್ ಮೆಸ್ಸಿ ವಿಶ್ವಕಪ್ ಇತಿಹಾಸದಲ್ಲಿ ತಮ ಮೊದಲ ಹ್ಯಾಟ್ರಿಕ್ ಗೋಲಿನ ದಾಖಲೆ ಮಾಡಿ ಮಿಂಚಿದ್ದಾರೆ. ಜರ್ಮನಿಯ ಮಿರೊಸ್ಲಾವ್ ಕ್ಲೋಸೆ ಅವರ ಅತಿ ಹೆಚ್ಚು ಗೋಲುಗಳ ದಾಖಲೆಯನ್ನು ಸರಿಗಟ್ಟಿದರು ಮೆಸ್ಸಿ ಅದ್ಭುತ ಪ್ರದರ್ಶನದ ನೆರವಿನಿಂದ ಅರ್ಜೆಂಟೀನಾ ತಂಡ ಅಲ್ಜೀರಿಯಾ ವಿರುದ್ಧ 3-0 ಗೋಲುಗಳ ಭರ್ಜರಿ ಜಯ ಸಾಧಿಸಿದೆ.**

ಹಾಲಿ ಚಾಂಪಿಯನ್ ಅರ್ಜೆಂಟೀನಾ ತನ್ನ ವಿಶ್ವಕಪ್ ಅಭಿಯಾನವನ್ನು ಶುಭಾರಂಭ ಮಾಡಿದೆ. ಅಮೆರಿಕದ ಕಾನ್ಸಾಸ್ ಸಿಟಿಯ ಆರೋಹೆಡ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೆಸ್ಸಿಆರಂಭದಿಂದಲೇ ಮಿಂಚಿದರು. ಇಂಟರ್ ಮಿಯಾಮಿ ತಂಡದ ಸಹ ಆಟಗಾರ ರೊಡ್ರಿಗೊ ಡಿ ಪೌಲ್ ನೀಡಿದ ಅದ್ಭುತ ಪಾಸ್ ಅನ್ನು ಗೋಲಾಗಿ ಪರಿವರ್ತಿಸುವ ಮೂಲಕ ಅವರು ಪಂದ್ಯದ ಆರಂಭಿಕ ನಿಮಿಷಗಳಲ್ಲೇ ಅರ್ಜೆಂಟೀನಾಗೆ ಮುನ್ನಡೆ ತಂದುಕೊಟ್ಟರು. ಎರಡನೇ ರ್ಧದ ಆರಂಭದಲ್ಲೇ ಮತ್ತೊಂದು ಗೋಲು ದಾಖಲಿಸಿದ ಮೆಸ್ಸಿ, ಪಂದ್ಯ ಮುಗಿಯುವ ಕೆಲ ಕ್ಷಣಗಳ ಮೊದಲು ಮೂರನೇ ಗೋಲು ಬಾರಿಸಿ ತಮ್ಮ ಮೊದಲ ವಿಶ್ವಕಪ್ ಹ್ಯಾಟ್ರಿಕ್ ಪೂರ್ಣಗೊಳಿಸಿದರು. ಬಳಿಕ ಅವರು ಮೈದಾನ ತೊರೆಯುವಾಗ ಕ್ರೀಡಾಂಗಣದಲ್ಲಿದ್ದ ಸಾವಿರಾರು ಅಭಿಮಾನಿಗಳು ಎದ್ದು ನಿಂತು ಚಪ್ಪಾಳೆ ತಟ್ಟಿ ಗೌರವ ಸಲ್ಲಿಸಿದರು.



ಈ ಮೂರು ಗೋಲುಗಳೊಂದಿಗೆ ಮೆಸ್ಸಿವಿಶ್ವಕಪ್‌ನಲ್ಲಿ ತಮ ಗೋಲುಗಳ ಸಂಖ್ಯೆಯನ್ನು 16ಕ್ಕೆ ಏರಿಸಿಕೊಂಡು ಜರ್ಮನಿಯ ಮಾಜಿ ಆಟಗಾರ ಮಿರೊಸ್ಲಾವ್ ಕ್ಲೋಸೆ ಅವರ ದಾಖಲೆಯ ಸಮಬಲ ಸಾಧಿಸಿದರು. ಮುಂದಿನ ಪಂದ್ಯಗಳಲ್ಲಿ ಅವರು ಈ ದಾಖಲೆಯನ್ನು ಹಿಂದಿಕ್ಕುವ ಸಾಧ್ಯತೆ ಹೆಚ್ಚಿದೆ. ರೊಸಾರಿಯೊ ಮೂಲದ ಮೆಸ್ಸಿ ವಿಶ್ವಕಪ್‌ನ ಐದು ವಿಭಿನ್ನ ಆವೃತ್ತಿಗಳಲ್ಲಿ ಗೋಲು ದಾಖಲಿಸಿದ ಕೇವಲ ಎರಡನೇ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ವಿಶ್ವಕಪ್‌ಗೆ ಅವರು ಪಾದಾರ್ಪಣೆ ಮಾಡಿದ್ದು 20 ವರ್ಷಗಳ ಹಿಂದೆ ಸರ್ಬಿಯಾ ಮತ್ತು ಮೊಂಟೆನೆಗ್ರೊ ವಿರುದ್ಧದ ಪಂದ್ಯದಲ್ಲಿ ಅಂದೂ ಅವರು ಗೋಲು ದಾಖಲಿಸಿದ್ದರು. ಇದು ಮೆಸ್ಸಿಅವರ ವೃತ್ತಿಜೀವನದ 61ನೇ ಹ್ಯಾಟ್ರಿಕ್ ಆಗಿದ್ದು, ಅರ್ಜೆಂಟೀನಾ ರಾಷ್ಟ್ರೀಯ ತಂಡದ ಪರ ದಾಖಲಿಸಿದ 11ನೇ ಹ್ಯಾಟ್ರಿಕ್ ಆಗಿದೆ. ಅಲ್ಲದೆ, ವಿಶ್ವಕಪ್‌ನಲ್ಲಿ ಸತತ ಐದು ಪಂದ್ಯಗಳಲ್ಲಿ ಗೋಲು ಗಳಿಸಿದ ಸಾಧನೆಯನ್ನೂ ಅವರು ಮಾಡಿದರು.

ಲಿಯೋ ಬಗ್ಗೆ ಹೇಳಲು ನನ್ನ ಬಳಿ ಪದಗಳೇ ಇಲ್ಲ. ಅವರು ಅದ್ಭುತ ಆಟಗಾರ. ಫುಟ್‌ಬಾಲ್ ಪ್ರಪಂಚದ ಪ್ರತಿಯೊಬ್ಬರೂ ಅವರನ್ನು ಆಡುತ್ತಿರುವುದನ್ನು ನೋಡಲು ಬಯಸುತ್ತಾರೆ ಮತ್ತು ಆನಂದಿಸುತ್ತಾರೆ ಎಂದು ಅರ್ಜೆಂಟೀನಾ ಮುಖ್ಯ ಕೋಚ್ ಲಿಯೊನೆಲ್ ಸ್ಕಲೋನಿ ಹೇಳಿದ್ದಾರೆ. ಮೆಸ್ಸಿಯ ಪ್ರದರ್ಶನವು ಇದೇ ದಿನ ಮಿಂಚಿದ್ದ ಇತರ ಇಬ್ಬರು ತಾರಾ ಆಟಗಾರರಾದ ಫ್ರಾನ್?ಸನ ಕೈಲಿಯನ್ ಎಂಬಾಪೆ ಮತ್ತು ನಾರ್ವೆಯ ಎರ್ಲಿಂಗ್ ಹಾಲೆಂಡ್ ಅವರ ಸಾಧನೆಗಳನ್ನು ಮರೆಮಾಡಿತು. ಸೆನೆಗಲ್ ವಿರುದ್ಧ ಫ್ರಾನ್?ಸನ 3-1 ಗೆಲುವಿನಲ್ಲಿ ಎಂಬಾಪೆ ಎರಡು ಗೋಲು ಗಳಿಸಿ ವಿಶ್ವಕಪ್ ಗೋಲುಗಳ ಪಟ್ಟಿಯಲ್ಲಿ 14 ಗೋಲುಗಳೊಂದಿಗೆ ನಾಲ್ಕನೇ ಸ್ಥಾನವನ್ನು ಹಂಚಿಕೊಂಡರು. ಮತ್ತೊಂದೆಡೆ ಇರಾಕ್ ವಿರುದ್ಧ ನಾರ್ವೆಯ 4-1 ಜಯದಲ್ಲಿ ಹಾಲೆಂಡ್ ಎರಡು ಗೋಲು ದಾಖಲಿಸಿದರು.

ಮೆಸ್ಸಿ ಒಬ್ಬ ಹುಚ್ಚು ಪ್ರತಿಭೆ ಎಂದು ಹಾಲೆಂಡ್ ಸಾಮಾಜಿಕ ಜಾಲತಾಣ ಸ್ನಾಪ್‌ಚಾಟ್‌ನಲ್ಲಿ ಪ್ರತಿಕ್ರಿಯಿಸಿದರು.ಮುಂದಿನ ವಾರ 39ನೇ ವಯಸ್ಸಿಗೆ ಕಾಲಿಡಲಿರುವ ಮೆಸ್ಸಿ, ವಿಶ್ವಕಪ್‌ಗೆ ಮುನ್ನ ಇಂಟ-ರ್ ಮಿಯಾಮಿ ಪರ ಆಡುತ್ತಿದ್ದಾಗ ಸಣ್ಣ ಪ್ರಮಾಣದ ಹ್ಯಾಮ್‌ಸ್ಟ್ರಿಂಗ್ ಗಾಯದಿಂದ ಬಳಲುತ್ತಿದ್ದರು. ಆದರೂ, ಎಂಟು ಬಾರಿ ಬ್ಯಾಲನ್ ಡಿಓರ್ ಪ್ರಶಸ್ತಿ ಗೆದ್ದಿರುವ ಅವರು ಕಳೆದ ವಾರ ಐಸ್‌ಲ್ಯಾಂಡ್ ವಿರುದ್ಧದ ಸಿದ್ಧತಾ ಪಂದ್ಯದಲ್ಲಿ ಕೇವಲ 20 ನಿಮಿಷ ಆಡಿದರೂ ಪೆನಾಲ್ಟಿ ಮೂಲಕ ಗೋಲು ದಾಖಲಿಸಿ ತಮ್ಮ ಫಿಟ್‌ನೆಸ್ ಸಾಬೀತುಪಡಿಸಿದ್ದರು. ಅಲ್ಜೀರಿಯಾ ವಿರುದ್ಧದ ಪಂದ್ಯವು ಮೆಸ್ಸಿಯ ಅಂತಾರಾಷ್ಟ್ರೀಯ ವೃತ್ತಿಜೀವನದ 200ನೇ ಪಂದ್ಯವಾಗಿ-ತ್ತು. 2005ರಲ್ಲಿ 18ನೇ ವಯಸ್ಸಿನಲ್ಲಿ ಅವರು ಅರ್ಜೆಂಟೀನಾ ಪರ ಪದಾರ್ಪಣೆ ಮಾಡಿದ್ದರು. ಈ ಪಟ್ಟಿಯಲ್ಲಿ ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ (228ಕ್ಕೂ ಹೆಚ್ಚು ಪಂದ್ಯಗಳು) ಮತ್ತು ಕುವೈತ್‌ನ ಬಾದರ್ ಅಲ್-ಮುತಾವಾ ಮಾತ್ರ ಮೆಸ್ಸಿಗಿಂತ ಮುಂದಿದ್ದಾರೆ.

ವಿಶ್ವಕಪ್‌ನ ಐದು ಆವೃತ್ತಿಗಳಲ್ಲಿ ಗೋಲು ಗಳಿಸಿದ ಆಟಗಾರರ ಪಟ್ಟಿಯಲ್ಲಿ ಮೆಸ್ಸಿ ಮತ್ತು ರೊನಾಲ್ಡೊ ಮಾತ್ರ ಸ್ಥಾನ ಪಡೆದಿದ್ದಾರೆ. ಅರ್ಜೆಂಟೀನಾ ತಂಡವು ತನ್ನ ಶಿಬಿರವನ್ನು ಕಾನ್ಸಾಸ್ ಸಿಟಿಯಲ್ಲಿ ನಡೆಸುತ್ತಿರುವ ನಾಲ್ಕು ರಾಷ್ಟ್ರೀಯ ತಂಡಗಳಲ್ಲಿ ಒಂದಾಗಿದೆ. ತಂಡದ ಆಗಮನದ ಬಳಿಕ ಇಡೀ ಪ್ರದೇಶದಲ್ಲಿ ಮೆಸ್ಸಿ ಹುಚ್ಚು ಆವರಿಸಿದ್ದು, ಪಂದ್ಯ ದಿನ ಸಾವಿರಾರು ಅಭಿಮಾನಿಗಳು ಮೆಸ್ಸಿಯ 10ನೇ ಸಂಖ್ಯೆಯ ಜೆರ್ಸಿ ಧರಿಸಿ ಕ್ರೀಡಾಂಗಣಕ್ಕೆ ಹರಿದುಬಂದಿದ್ದರು. ಪಂದ್ಯ ವೀಕ್ಷಣಾ ಕಾರ್ಯಕ್ರಮದಲ್ಲಿ ಅರ್ಜೆಂಟೀನಾ ಜೆರ್ಸಿ ತೊಟ್ಟ ಮೇಕೆಯೊಂದನ್ನು ವೇದಿಕೆಗೆ ಕರೆತಂದಿದ್ದು, ಮೆಸ್ಸಿಯನ್ನು ಫುಟ್‌ಬಾಲ್‌ನ ಸಾರ್ವಕಾಲಿಕ ಶ್ರೇಷ್ಠ ಆಟಗಾರ ಎಂದು ಬಣ್ಣಿಸುವ ಅಭಿಮಾನಿಗಳ ಉತ್ಸಾಹಕ್ಕೆ ಸಾಕ್ಷಿಯಾಯಿತು. ಮೆಸ್ಸಿ ಮತ್ತೊಮ್ಮೆ ತಮ್ಮ ಪ್ರದರ್ಶನದ ಮೂಲಕ ಆ ಬಿರುದಿಗೆ ತಕ್ಕವರು ಎಂಬುದನ್ನು ಸಾಬೀತುಪಡಿಸಿದರು.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka